ಕರ್ನಾಟಕ ಸರ್ಕಾರ

# ಮಾಹಿತಿ ಹಕ್ಕು ಅಧಿನಿಯಮ 2005
# ಪ್ರಕರಣ 4(ಬಿ) 1 ರಿಂದ 17 ರವರೆಗೆ

ಉಪನಿರ್ದೇಶಕರ ಕಛೇರಿ

ತೋಟಗಾರಿಕೆ ಇಲಾಖೆ

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್

ಮಂಗಳೂರು

## 4(1) ಬಿ ತೋಟಗಾರಿಕೆ ಉಪನಿರ್ದೇಶಕರವರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು

1. ತೋಟಗಾರಿಕೆ ಉಪನಿರ್ದೇಶಕರು ಜಿಲ್ಲೆಯಲ್ಲಿ ತೋಟಗಾರಿಕೆ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ,ಸರಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವಿಕೆ,ತೋಟಗಾರಿಕೆ ವಿಸ್ತರಣಾ ಚಟುವಟಿಕೆಗಳ, ಇಲಾಖಾ ಕ್ಷೇತ್ರ ನರ್ಸರಿಗಳ ನಿರ್ವಹಣೆ, ಸಸ್ಯೋತ್ಪಾದನೆ, ತೋಟಗಾರಿಕೆ ಪ್ರಚಾರ ಮುಂತಾದ ತೋಟಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಜವಬ್ದಾರರಾಗಿರುತ್ತಾರೆ.
2. ಜಿಲ್ಲಾಮಟ್ಟದ ಸಭೆಗಳಲ್ಲಿ ತೋಟಗಾರಿಕೆ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಉಪನಿರ್ದೇಶಕರು ಸಮನ್ವಯ ಅಧಿಕಾರಿಗಳಾಗಿರುತ್ತಾರೆ.
3. ಅವರ ಅಧೀನದಲ್ಲಿ ಬರುವ ಕ್ಷೇತ್ರ/ನರ್ಸರಿ/ಉದ್ಯಾನವನ ತೋಟಗಳ ನಿರ್ವಹಣೆ ಮಾಡುವುದು ತೋಟಗಾರಿಕೆ ಉಪನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ.
4. ತೋಟಗಾರಿಕೆ ನಿರ್ದೇಶಕರು ,ಹಿರಿಯ ಅಧಿಕಾರಿಗಳು ವಹಿಸಿದ ಕೆಲಸ ಕಾರ್ಯಗಳನ್ನು ಕಾಲಕಾಲಕ್ಕೆ ಅನುಷ್ಠಾನ ಗೊಳಿಸುವುದು/ಕಾರ್ಯಗತಗೊಳಿಸುವುದು.
5. ಇವರು ಜಿಲ್ಲೆಯ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮೇಲುರುಜು ಮಾಡುವ ಅಧಿಕಾರಿಯಾಗಿರುತ್ತಾರೆ.
6. ಆಯವ್ಯಯದಲ್ಲಿ ಜಿಲ್ಲೆಗೆ ನಿಗದಿಪಡಿಸಿದಂತಹ ಸಾರ್ವಜನಿಕ ಅನುದಾನವನ್ನು ಅನುಮೋದಿತ ಕ್ರಿಯಾ ಯೊಜನೆಯಂತೆ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಗುಣಮಟ್ಟದೊಂದಿಗೆ ಸಾಧಿಸಿ ಖರ್ಚ ಭರಿಸಲು ಹಾಗೂ ಲೆಕ್ಕಪತ್ರಗಳನ್ನಿಡಲು ಜವಾಬ್ದಾರರಾಗಿರುತ್ತಾರೆ.
7. ಸಿಬ್ಬಂದಿಗಳ ನಡುವೆ ಶಿಸ್ತು ಪಾಲನೆ ಇರುವಂತೆ ಮಾಡುವುದು
8. ಸರ್ಕಾರದಿಂದ ತೋಟಗಾರಿಕೆ ಅಭಿವೃದ್ಧಿ ಹಾಗೂ ವಿಸ್ತರಣಾ ಚಟುವಟಿಕೆಗಳ ಅನುಷ್ಠಾನ ನಿಟ್ಟಿನಲ್ಲಿ ಸರಕಾರ/ಇಲಾಖೆಯಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು.

**4(ಬಿ)(II)ಅಧಿಕಾರಿ/ನೌಕರರುಗಳ ಅಧಿಕಾರ ಮತ್ತು ಕರ್ತವ್ಯಗಳು**

| | |
|---|---|
| ಸೇವಕರು | ಕಛೇರಿಯನ್ನು ಶುಚಿಯಾಗಿಡುವುದು, ಕಡತ ಮತ್ತು ಟಪ್ಪಾಲುಗಳನ್ನು ತೆಗೆದು ಕೊಂಡು ಹೋಗುವುದು, ಪತ್ರಗಳ ವಿತರಣೆ, ಅಂಚೆಕಚೇರಿ, ಖಜಾನೆ, ಬ್ಯಾಂಕುಗಳಿಗೆ ಹೋಗಿ ಬರುವುದು ಹಾಗೂ ಮೇಲಾಧಿಕಾರಿಗಳು ಸೂಚಿಸಿದ ಇತರೇ ಕೆಲಸಗಳನ್ನು ನಿರ್ವಹಿಸುವುದು |
| ದ್ವಿತೀಯ ದರ್ಜೆ ಸಹಾಯಕರು | ರಾಜ್ಯವಲಯ ಬಜೆಟ್ ನಿರ್ವಹಣೆಗೆ ಸಂಬಂಧಿಸಿದ ಕೆಲಸಗಳು, ಆದಾಯ ಮತ್ತು ಖರ್ಚಿನ ತ:ಖ್ತೆ ನಿರ್ವಹಣೆ ಹಾಗೂ ಲೆಕ್ಕ ಸಮನ್ವಯೀಕರಣಗೊಳಿಸುವಿಕೆ. ಕಛೇರಿಯ ಆವಕ ಮತ್ತು ಜಾವಕ ವಹಿಗಳ ನಿರ್ವಹಣೆ, ರಾಜ್ಯವಲಯ ಡಿ.ಸಿ.ಬಿಲ್ಲುಗಳ ಮೇಲುರುಜು ಹಾಗೂ ಮಂಜೂರಾತಿ ನೀಡುವಿಕೆ, ಪ್ರವಾಸಭತ್ಯೆ ಬಿಲ್ಲು ತಯಾರಿ ಹಾಗೂ ಮೇಲುರುಜು, ಸಾಂದರ್ಬಿಕ ರಜಾ ವಹಿ ನಿರ್ವಹಣೆ, ಸ್ಟೇಷನರಿ ದಾಸ್ತಾನು ನಿರ್ವಹಣೆ ಸಭೆಯ ದಿನಾಂಕಗಳನ್ನು ಸೂಚನಾ ಫಲಕದಲ್ಲಿ ನಮೂದಿಸುವುದು ಹಾಗೂ ವಿಷಯ ವಹಿ ನಿರ್ವಹಣೆ |
| ಬೆರಳಚ್ಚುಗಾರರು | ಶುದ್ದಪ್ರತಿ ತಯಾರಿ, ಕಂಪ್ಯೂಟರ್(ಬೆರಳಚ್ಚು), ಸ್ಟೇಷನರಿ ದಾಸ್ತಾನು ನಿರ್ವಹಣೆ, ತೋಟಗಾರಿಕೆ ಉಪ ನಿರ್ದೇಶಕರವರ ಪ್ರವಾಸ ದಿನಚರಿಗಳ ನಿರ್ವಹಣೆ, ಪ್ರವಾಸಭತ್ಯೆ ಬಿಲ್ಲುಗಳ ನಿರ್ವಹಣೆಗೆ ದ್ವಿ.ದ.ಸ.ರವರಿಗೆ ಸಹಕರಿಸುವುದು ಹಾಗೂ ಬೆರಳಚ್ಚು ಮಾಡಿದ ಪ್ರತಿಗಳ ಲೆಕ್ಕಗಳ ನಿರ್ವಹಣೆ. |
| ಪ್ರಥಮ ದರ್ಜೆ ಸಹಾಯಕರು | ಜಿಲ್ಲಾ ಪಂಚಾಯತ್, ರಾಷ್ಟ್ರೀಯ ತೊಟಗಾರಿಕೆ ಮಿಷನ್ ,ರಾಷ್ಟ್ರೀಯ ಔಷಧೀಯ ಬೆಳೆಗಳ ಮಿಷನ್ ,ಸೂಕ್ಷ್ಮ ನೀರಾವರಿ ಯೋಜನೆಗಳ ನಗದುಪುಸ್ತಕ ಮತ್ತು ನಗದು ವ್ಯವಹಾರ ನಿರ್ವಹಣೆ, ಜಿಲ್ಲಾ ಪಂಚಾಯತ್ ಬಜೆಟ್ ನಿರ್ವಹಣೆ, ಕಛೇರಿಯ ಸಾದಿಲ್ವಾರು ಬಿಲ್ಲು ಹಾಗೂ ವೇತನ ಬಿಲ್ಲು ತಯಾರಿ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಬಿಲ್ಲುಗಳ ಮಂಜೂರಾತಿ ಹಾಗೂ ಮೇಲುರುಜು, ಲಾಗ್ ಪುಸ್ತಕ ನಿರ್ವಹಣೆ, ವಾಹನಕ್ಕೆ ಸಂಬಂಧಿಸಿದ ಕಡತ, ದಾಖಲಾತಿ ಗಳ ನಿರ್ವಹಣೆ, ದಿನಗೂಲಿ ನೌಕರರಿಗೆ ಸಂಬಂದಿಸಿದ ಕಡತಗಳ ನಿರ್ವಹಣೆ ಹಾಗೂ ವಿಷಯ ವಹಿ ನಿರ್ವಹಣೆ. CRF ಹಾಗೂ ಗುಡ್ಡಗಾಡು ಯೋಜನೆಗಳಿಗೆ ಸಂಬಂಧಿಸಿದಂತೆ ಕೆಲಸ ನಿರ್ವಹಣೆ. |

| | |
|---|---|
| ಅಧೀಕ್ಷಕರು | ಸಿಬ್ಬಂದಿ ವರ್ಗ ವಿಭಾಗದ ವೈಯಕ್ತಿಕ ಕಡತಗಳ ಸೇವಾ ವಹಿ ಕಾರ್ಯ ನಿರ್ವಹಣಾ ವರದಿ / ಆಸ್ತಿ ಮತ್ತು ಕಡತಗಳ ನಿರ್ವಹಣೆ.ಆಡಿಟ್ ವರದಿ ಹಾಗೂ ಕಛೇರಿ ತಪಾಸಣಾ ವರದಿ ನಿರ್ವಹಣೆ, ವಿಚಾರಣಾ ವಹಿಗಳು(ಶಿಸ್ತು ಪ್ರಕರಣ) ಕಛೇರಿ ಆದೇಶ ಪುಸ್ತಕದ ನಿರ್ವಹಣೆ |
| ಸಹಾಯಕ ಸಾಂಖ್ಯಿಕ ಅಧಿಕಾರಿ | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ಔಷಧಿ ಬೆಳೆಗಳ ಮಿಷನ್ ಯೋಜನೆ, ರಾಜ್ಯವಲಯ, ಜಿಲ್ಲಾವಲಯ ಯೋಜನೆಗಳ ಪ್ರಗತಿ ವರದಿಗಳ ಕ್ರೋಢಿಕರಣ ಹಾಗೂ ಗಣಕೀಕರಣ.ತೋಟಗಾರಿಕೆ ಬೆಳೆಗಳ ಅಂಕಿ ಅಂಶಗಳ ಕ್ರೋಢಿಕರಣ ಹಾಗೂ ಗಣಕೀಕರಣ.ಬೆಳೆ ಸಮೀಕ್ಷೆ , ದಾಖಲಾತಿ, ಅಂಕಿ ಅಂಶಗಳ ಹೊಂದಾಣಿಕೆ ಇತ್ಯಾದಿ ಕೆಲಸಗಳ ನಿರ್ವಹಣೆ.ಹವಾಮಾನ ವರದಿ , ಮಾರುಕಟ್ಟೆ ಸಮೀಕ್ಷೆ, ಅಂಕಿಅಂಶಗಳು , ಬೆಳೆ ಸಾಲ ಅಂಕಿ ಅಂಶಗಳ ದಾಖಲೆಗಳ ನಿರ್ವಹಣೆ ಹಾಗೂ ಗಣಕೀಕರಣ.ಕೆ.ಡಿ.ಪಿ ವರದಿ , ಅಲ್ಪ ಸಂಖ್ಯಾತರ ವರದಿ , ಮಹಿಳಾಭಿವೃದ್ಧಿ ಪ್ರಗತಿ ವರದಿ , ಅಂಗ ವಿಕಲ ಪ್ರಗತಿ ವರದಿ ಪ.ಜಾ/ ಪ.ಪಂ ಪ್ರಗತಿ ವರದಿಗಳ ಕ್ರೋಢಿಕರಣ ಹಾಗೂ ಮಷಿನ್ ಹಾಗೂ ಗಣಕೀಕರಣ. |
| ಸಹಾಯಕ ತೋಟಗಾರಿಕೆ ಅಧಿಕಾರಿ -1 | ರಾಜ್ಯವಲಯ, ಜಿಲ್ಲಾವಲಯ ಯೋಜನೆಗಳ ಕ್ರಿಯಾಯೋಜನೆ , MMR, MPIC ಗಳ ತಯಾರಿ ಕಡತಗಳ ನಿರ್ವಹಣೆ.ರಾಜ್ಯವಲಯ, ಜಿಲ್ಲಾವಲಯ ಯೋಜನೆಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳ ನಿರ್ವಹಣಾ ಬಿಲ್ಲುಗಳ ಪರಿಶೀಲನೆ.ಖರೀದಿ ಪ್ರಕ್ರಿಯೆ ಕಡತ ನಿರ್ವಹಣೆ.ಸಾರ್ವಜನಿಕ ದೂರಾರ್ಜಿಗಳ ಕಡತ ನಿರ್ವಹಣೆ.ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಮಟ್ಟದ ಸಭೆಗಳ ಕಡತ ನಿರ್ವಹಣೆ.ತಾಲೂಕು ಅಧಿಕಾರಿಗಳ ದಿನಚರಿ ನಿರ್ವಹಣೆ. |
| ಸಹಾಯಕ ತೋಟಗಾರಿಕೆ ಅಧಿಕಾರಿ -2 | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ಔಷಧಿ ಬೆಳೆಗಳ ಮಿಷನ್ ಹಾಗೂ ಹನಿನೀರಾವರಿ ಯೋಜನೆಗಳ ಕ್ರಿಯಾ ಯೋಜನೆಗಳ ತಯಾರಿ , ಕಡತಗಳ ನಿರ್ವಹಣೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ಔಷಧಿ ಬೆಳೆಗಳ ಮಿಷನ್ ಹಾಗೂ ಹನಿನೀರಾವರಿ ಯೋಜನೆಗಳ ಪತ್ರ ವ್ಯವಹಾರಗಳ ಸುತ್ತೋಲೆ ನಿರ್ವಹಣೆ ,ಬಿಲ್ಲುಗಳ ಪರಿಶೀಲನೆ.ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಗಳ ನಿರ್ವಹಣೆ.ವಿಧಾನ ಸಭೆ / ವಿಧಾನ ಪರಿಷತ್ ಪ್ರಶ್ನಾಗಳ ವಹಿ ಕಡತ ನಿರ್ವಹಣೆ. ಇತರೇ ಇಲಾಖೆಗಳ ಮೂಲಕ ಅನುಷ್ಟಾನಗೊಳ್ಳುವ ಸರಕಾರದ ವಿಶೇಷ ಯೋಜನೆಗಳ ಕಡತಗಳ ನಿರ್ವಹಣೆ.( ಸುವರ್ಣ ಗ್ರಾಮ, ಅಕ್ಷರ ದಾಸೋಹ, ಪಡಿತರ ಚೀಟಿ ಇತ್ಯಾದಿ). |
| ಸಹಾಯಕ ತೋಟಗಾರಿಕೆ ಅಧಿಕಾರಿ -3 | ಇಲಾಖಾ ಕ್ಷೇತ್ರ ಸಸ್ಯಾಗಾರಗಳಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳ ಹಾಗೂ ಕಡತಗಳ ನಿರ್ವಹಣೆ. ( ಭೂ ದಾಖಲೆಗಳು , ಆದಾಯ ಖರ್ಚು , ಫಸಲು ಹರಾಜು , ಸಸ್ಯಾಭಿವೃದ್ಧಿ ಪ್ರಗತಿ ವರದಿ ಇತ್ಯಾದಿ )ತೋಟಗಾರಿಕೆ ಬೆಳೆಗಳ ಮಾಲಿ ಮೌಲ್ಯಮಾಪನ.ಪ್ರಕೃತಿ ವಿಕೋಪ, ಬೆಳೆಹಾನಿ ಕಡತಗಳ ನಿರ್ವಹಣೆ.RKVY, NREGA, SGSY, ATMA, ಯೋಜನೆಗಳ ಕಡತಗಳ ನಿರ್ವಹಣೆ. |
| ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾ.ತೋ.ಮಿ) | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ಔಷಧಿ ಬೆಳೆಗಳ ಮಿಷನ್ ಯೋಜನೆಗಳಿಗೆ ಸಂಬಂಧಿಸಿದ ಕೆಲಸಗಳ ತಾಂತ್ರಿಕ ಉಸ್ತುವಾರಿ.ಜಿಲ್ಲಾ ಹಾಪ್‌ಕಾಮ್ಸ್ ಸಂಸ್ಥೆಯ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ನಿರ್ವಹಣೆ, ಟೆಂಡರ್ ಪ್ರಕ್ರಿಯೆ , ತಾಲೂಕಿನಿಂದ ಬಂದಂತಹ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಸಲ್ಲಿಸುವುದು. |
| ಕೇಂದ್ರ ಕಛೇರಿ ಸಹಾಯಕರು. | ಕಛೇರಿಯ ತಾಂತ್ರಿಕ /ಆಡಳಿತ ಶಾಖೆಯ ಕೆಲಸಗಳನ್ನು ನಿರ್ವಹಿಸಲು ನಿಗಾ ವಹಿಸುವುದು.ತಾಂತ್ರಿಕ ಶಾಖೆಯ ಎಂ.ಎಂ.ಆರ್ ತಯಾರಿಸುವುದು, ಪ್ರಗತಿ ವರದಿ ಇತ್ಯಾದಿ ಕೆಲಸಗಳ ಪರಿಶೀಲನೆ, ಟೆಂಡರ್ ಕೆಲಸ ನಿರ್ವಹಣೆ ಹಾಗೂ ಮಾಹಿತಿ ಹಕ್ಕು ಸಂಬಂಧಿಸಿದ ಕೆಲಸ ನಿರ್ವಹಣೆ.ಪ್ರಮುಖ ವಿಷಯಗಳನ್ನ ತೋಟಗಾರಿಕೆ ಉಪ ನಿರ್ದೇಶಕರೊಂದಿಗೆ ಚರ್ಚಿಸಿ ತನ್ನ ಅಧೀನ ಸಿಬ್ಬಂದಿಗಳೊಂದಿಗೆ ಕಡತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮವಹಿಸುವುದು.ಹಾಗೂ ಕಛೇರಿಯ ಮುಖ್ಯಸ್ಥರಿಗೆ ಸಹಕರಿಸುವುದು. |
| ತೋಟಗಾರಿಕೆ ಉಪ ನಿರ್ದೇಶಕರು | • ತೋಟಗಾರಿಕೆ ಉಪನಿರ್ದೇಶಕರು ಜಿಲ್ಲೆಯಲ್ಲಿ ತೋಟಗಾರಿಕೆ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ,ಸರಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವಿಕೆ, |

| | |
|---|---|
| | ತೋಟಗಾರಿಕೆ ವಿಸ್ತರಣಾ ಚಟುವಟಿಕೆಗಳ, ಇಲಾಖಾ ಕ್ಷೇತ್ರ ನರ್ಸರಿಗಳ ನಿರ್ವಹಣೆ, ಸಸ್ಯೋತ್ಪಾದನೆ, ತೋಟಗಾರಿಕೆ ಪ್ರಚಾರ ಮುಂತಾದ ತೋಟಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಜವಾಬ್ದಾರರಾಗಿರುತ್ತಾರೆ.<br>• ಜಿಲ್ಲಾಮಟ್ಟದ ಸಭೆಗಳಲ್ಲಿ ತೋಟಗಾರಿಕೆ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಉಪನಿರ್ದೇಶಕರು ಸಮನ್ವಯ ಅಧಿಕಾರಿಗಳಾಗಿರುತ್ತಾರೆ.<br>• ಅವರ ಅಧೀನದಲ್ಲಿ ಬರುವ ಕ್ಷೇತ್ರ/ನರ್ಸರಿ/ಉದ್ಯಾನವನ ತೋಟಗಳ ನಿರ್ವಹಣೆ ಮಾಡುವುದು ತೋಟಗಾರಿಕೆ ಉಪನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ.<br>• ತೋಟಗಾರಿಕೆ ನಿರ್ದೇಶಕರು ,ಹಿರಿಯ ಅಧಿಕಾರಿಗಳು ವಹಿಸಿದ ಕೆಲಸ ಕಾರ್ಯಗಳನ್ನು ಕಾಲಕಾಲಕ್ಕೆ ಅನುಷ್ಠಾನಗೊಳಿಸುವುದು/ಕಾರ್ಯಗತಗೊಳಿಸುವುದು.<br>• ಇವರು ಜಿಲ್ಲೆಯ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮೇಲುರುಜು ಮಾಡುವ ಅಧಿಕಾರಿಯಾಗಿರುತ್ತಾರೆ.<br>• ಆಯವ್ಯಯದಲ್ಲಿ ಜಿಲ್ಲೆಗೆ ನಿಗದಿಪಡಿಸಿದಂತಹ ಸಾರ್ವಜನಿಕ ಅನುದಾನವನ್ನು ಅನುಮೋದಿತ ಕ್ರಿಯಾ ಯೋಜನೆಯಂತೆ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಗುಣಮಟ್ಟದೊಂದಿಗೆ ಸಾಧಿಸಿ ಖರ್ಚ ಭರಿಸಲು ಹಾಗೂ ಲೆಕ್ಕಪತ್ರಗಳನ್ನಿಡಲು ಜವಾಬ್ದಾರರಾಗಿರುತ್ತಾರೆ.<br>• ಸಿಬ್ಬಂದಿಗಳ ನಡುವೆ ಶಿಸ್ತು ಪಾಲನೆ ಇರುವಂತೆ ಮಾಡುವುದು<br>• ಸರ್ಕಾರದಿಂದ ತೋಟಗಾರಿಕೆ ಅಭಿವೃದ್ಧಿ ಹಾಗೂ ವಿಸ್ತರಣಾ ಚಟುವಟಿಕೆಗಳ ಅನುಷ್ಠಾನ ನಿಟ್ಟನಲ್ಲಿ ಸರಕಾರ/ಇಲಾಖೆಯಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು.<br>• ತೋಟಗಾರಿಕೆ ನಿರ್ದೇಶಕರು ಸಂಬಂಧಸಿದ ತೋಟಗಾರಿಕೆ ಜಂಟಿ ನಿರ್ದೇಶಕರು, ಕಾಲಕಾಲಕ್ಕೆ ವಹಿಸಿದ ಇಲಾಖಾ ಜಿಲ್ಲಾ ಕೆಲಸಕಾರ್ಯಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವುದು |

**4(ಬಿ)III: ನಿರ್ಣಯ ತೆಗೆದುಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾಗುವ ಕ್ರಮ ಮೇಲ್ವಿಚಾರಣೆ ಚಾನಲ್‌ಗಳು ಮತ್ತು ಅಕೌಂಟೆಬಿಲಿಟಿ ಸೇರಿದಂತೆ**

| | |
|---|---|
| (ವಿಷಯ ನಿರ್ವಾಹಕರು)<br>ದ್ವಿತೀಯ ದರ್ಜೆ ಸಹಾಯಕರು:<br>ಪ್ರಥಮ ದರ್ಜೆ ಸಹಾಯಕರು | ತಾವು ಸ್ವೀಕರಿಸಿದ ಪತ್ರದ ಸಂಬಂಧ, ನಿಯಮಗಳು ಮತ್ತು ಸುತ್ತೋಲೆ/ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತವನ್ನು ವಿಳಂಬವಿಲ್ಲದೇ ತ್ವರಿತವಾಗಿ ಮಂಡಿಸುವುದು. |
| ಬೆರಳಚ್ಚುಗಾರರು | ತೋಟಗಾರಿಕೆ ಉಪ ನಿರ್ದೇಶಕರು/ತಾಂತ್ರಿಕ ಸಹಾಯಕರು/ಅಧೀಕ್ಷಕರುಗಳು ಕಡತವನ್ನು ಪರಿಶೀಲಿಸಿ ನೀಡುವ ಕರಡನ್ನು ಬೆರಳಚ್ಚು ಮಾಡುವುದು |
| ಅಧೀಕ್ಷಕರು | ತಮ್ಮ ವ್ಯಾಪ್ತಿಗೆ ಸಂಬಂಧಿಸಿದ ವಿಷಯ ನಿರ್ವಾಹಕರು ಮಂಡಿಸಿದ ಕಡತಗಳನ್ನು ಪರಿಶೀಲಿಸಿ ಮುಂದಿನ ಆದೇಶಕ್ಕಾಗಿ ಕಡತ ಮಂಡಿಸುವುದು |
| ಸಹಾಯಕ ಸಾಂಖ್ಯಿಕ ಅಧಿಕಾರಿ | ತಾವು ಸ್ವೀಕರಿಸಿದ ಪತ್ರದ ಸಂಬಂಧ ನಿಯಮಗಳ ಮತ್ತು ಸುತ್ತೋಲೆ ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತವನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಡಿಸುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ 1 | ತಾವು ಸ್ವೀಕರಿಸಿದ ಪತ್ರದ ಸಂಬಂಧ ನಿಯಮಗಳ ಮತ್ತು ಸುತ್ತೋಲೆ ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತವನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಡಿಸುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ 2 | ತಾವು ಸ್ವೀಕರಿಸಿದ ಪತ್ರದ ಸಂಬಂಧ ನಿಯಮಗಳ ಮತ್ತು ಸುತ್ತೋಲೆ ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತವನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಡಿಸುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ 3 | ತಾವು ಸ್ವೀಕರಿಸಿದ ಪತ್ರದ ಸಂಬಂಧ ನಿಯಮಗಳ ಮತ್ತು ಸುತ್ತೋಲೆ ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತವನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಡಿಸುವುದು. |
| ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾತೋಮಿ) | ಕಡತಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ ಕಡತಮಂಡಿಸುವುದು. |
| ಕೇಂದ್ರ ಕಛೇರಿ ಸಹಾಯಕರು. | ತಾಂತ್ರಿಕ ಹಾಗೂ ಆಡಳಿತ ಶಾಖೆಯ ಅಧಿಕಾರಿಗಳು /ಸಿಬ್ಬಂದಿಗಳು ಮಂಡಿಸುವ ಕಡತಗಳನ್ನು ಪರಿಶೀಲಿಸಿ ಮುಂದಿನ ಆದೇಶಕೋರಿ ಕಡತ ಮಂಡಿಸುವುದು. |
| ತೋಟಗಾರಿಕೆ ಉಪ ನಿರ್ದೇಶಕರು | ಪ್ರಸ್ತಾವನೆ ಮೇಲೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತೀರ್ಮಾನಿಸಿ ತಮ್ಮ ಹುದ್ದೆಗೆ ನೀಡಿರುವ ಅಧಿಕಾರಕ್ಕೆ ಒಳಪಟ್ಟು ಅನುಮೋದಿಸಿ/ ಮಂಜೂರಾತಿ ನೀಡುವುದು. ಅಗತ್ಯವಾದಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಯಾ ತೋಟಗಾರಿಕೆ ನಿರ್ದೇಶಕರವರಿಗೆ ಶಿಫಾರಸ್ಸು ಮಾಡುವುದು. |

**4(ಬಿ)IV:ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗದಿಪಡಿಸಲಾದ ವಿಧಾನಗಳು ಕಟ್ಟುಪಾಡುಗಳು**

| | |
|---|---|
| ಸೇವಕರು | ವಹಿಸಲಾದ ಎಲ್ಲಾ ಕಾರ್ಯಗಳನ್ನು ಆಯಾಯ ದಿನವೇ ನಿರ್ವಹಿಸುವುದು |
| ದ್ವಿತೀಯ ದರ್ಜೆ ಸಹಾಯಕರು | ವಹಿಸಲಾದ ಎಲ್ಲಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದು |
| ಬೆರಳಚ್ಚುಗಾರರು | ಕಛೇರಿಯ ಎಲ್ಲಾ ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು. ಬೆರಳಚ್ಚು ಮಾಡಿದ ಪ್ರತಿಗಳ ಲೆಕ್ಕವನ್ನು; ನಿರ್ವಹಿಸುವುದು |
| ಪ್ರಥಮ ದರ್ಜೆ ಸಹಾಯಕರು | ಹಂಚಿಕೆಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು |
| ಅಧೀಕ್ಷಕರು | ಕಛೇರಿಗೆ ಸಂಬಂಧಿಸಿದ ವಿಷಯ ನಿರ್ವಾಹಕರು ಮಂಡಿಸುವ ಕಡತ ಗಳನ್ನು ನಿಯಮಾನುಸಾರ ಪರಿಶೀಲಿಸಿ ಮುಂದಿನ ಆದೇಶ ಕೋರಿ ತೋಟಗಾರಿಕೆ ಉಪ ನಿರ್ದೇಶಕರವರಿಗೆ ಮಂಡಿಸುವುದು |
| ಸಹಾಯಕ ಸಾಂಖ್ಯಿಕ ಅಧಿಕಾರಿ | ಹಂಚಿಕೆಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು |
| ಸಹಾಯಕ ತೋಟಗಾರಿಕೆ ಅಧಿಕಾರಿ 1 | ಹಂಚಿಕೆಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು |
| ಸಹಾಯಕ ತೋಟಗಾರಿಕೆ ಅಧಿಕಾರಿ 2 | ಹಂಚಿಕೆಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು |
| ಸಹಾಯಕ ತೋಟಗಾರಿಕೆ ಅಧಿಕಾರಿ 3 | ಹಂಚಿಕೆಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು |
| ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾತೋಮಿ) | ಮಂಡಿಸಿದ ಕಡತಗಳನ್ನು ನಿಯಮಗಳನ್ವಯ ಪರಿಶೀಲಿಸಿ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು |
| ಕೇಂದ್ರ ಕಛೇರಿ ಸಹಾಯಕರು. | ಮಂಡಿಸಿದ ಕಡತಗಳನ್ನು ನಿಯಮಗಳನ್ವಯ ಪರಿಶೀಲಿಸಿ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು |
| ತೋಟಗಾರಿಕೆ ಉಪನಿರ್ದೇಶಕರು | ಸಲ್ಲಿಸಲಾದ ಕಡತಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದು, ಅಗತ್ಯತೆಗೆ ಅನುಗುಣವಾಗಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ದ.ಕ.ಜಿ.ಪ, ಹಾಗೂ ತೋಟಗಾರಿಕೆ ನಿರ್ದೇಶಕರಿಗೆ ಸಲ್ಲಿಸುವುದು. ಜರೂರು ಮತ್ತು ಆದ್ಯತೆಗೆ ಅನುಗುಣವಾಗಿ ಕಾರ್ಯ ನಿರ್ವಹಿಸುವುದು. |

**4(ಬಿ)(V):**

**ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸಲು ಉಪಯೋಗಿಸುವ/ನಿಯಂತ್ರಣದಲ್ಲಿಟ್ಟುಕೊಂಡಿರುವ ನಿಯಮಗಳು /ಸೂಚನೆಗಳು/ಕೈಪಿಡಿಗಳು/ದಾಖಲೆಗಳು/ನಿಬಂಧನೆಗಳು**

1) ಕರ್ನಾಟಕ ನಾಗರೀಕ ಸೇವಾ ನಿಯಮಗಳು(ಕೆಸಿಎಸ್ಆರ್)
2) ಕರ್ನಾಟಕ ನಾಗರೀಕ ಸೇವಾ ನಿಯಮ(ವರ್ಗೀಕರಣ, ನಿಯಂತ್ರಣ, ಮೇಲ್ಮನವಿ ನಿಯಮಗಳು) (ಸಿಸಿಎ ರೂಲ್ಸ್)
3) ಕರ್ನಾಟಕ ಆರ್ಥಿಕ ಸಂಹಿತೆ(ಕೆಎಫ್‌ಸಿ)
4) ಕಛೇರಿ ಕೈಪಿಡಿ(ಹೆಚ್‌ಬಿಒಪಿ)
5) ಆಯವ್ಯಯ ಕೈಪಿಡಿ(ಬಜೆಟ್ ಮಾನ್ಯುಲ್)
6) ಕರ್ನಾಟಕ ಖಜಾನೆ ಸಂಹಿತೆ(ಕೆಎಫ್‌ಸಿ)
7) ಸಾದಿಲ್ವಾರು ವೆಚ್ಚ ಕೈಪಿಡಿ(ಎಂಸಿಇ)
8) ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ(ಕೆಸಿಎಸ್ ಕಾಂಡಕ್ಟ್ ರೂಲ್ಸ್)
9) ಇಲಾಖಾ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಅಫ್ ಪವರ್ಸ್
10) ಸರ್ಕಾರದ ಅಧಿಸೂಚನೆಗಳು(ಸುತ್ತೋಲೆಗಳು)
11) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮಾರ್ಗಸೂಚಿಗಳು.
12) ರಾಷ್ಟ್ರೀಯ ಔಷಧೀಯ ಬೆಳೆಗಳ ಮಿಷನ್ ಮಾರ್ಗಸೂಚಿಗಳು.
13) ಸೂಕ್ಷ್ಮ ನೀರಾವರಿ ಯೋಜನೆ ಮಾರ್ಗಸೂಚಿಗಳು.
14) ಇಲಾಖೆಯ ಇತರೆ ಜಿಲ್ಲಾ ಹಾಗೂ ರಾಜ್ಯವಲಯ ಯೋಜನೆಗಳ ಮಾರ್ಗಸೂಚಿಗಳು ಹಾಗೂ ಸುತ್ತೋಲೆಗಳು.

**4(ಬಿ)VI: ಕಡತ ಶೀರ್ಷಿಕೆ**

| ಕ್ರಮ ಸಂಖ್ಯೆ | ಕಡತದ ಶಾಖೆ | | ದಾಖಲೆಗಳ ಉಲ್ಲೇಖ |
|---|---|---|---|
| 1 | ಆಡಳಿತ<br>ಸಿಬ್ಬಂದಿ | ADM<br>EST | ಈ ಕಛೇರಿ ಹಾಗೂ ಅಧೀನ ಕಛೇರಿಗಳ ಸಿಬ್ಬಂದಿ ಮತ್ತು ಅಧಿಕಾರಿಗಳ ಶಿಸ್ತು ನಡತೆ ಮತ್ತು ಎತರೆ ವಿಷಯಗಳು |
| 2 | ಶಿಸ್ತು ಶಾಖೆ | DEP | |
| 3 | ಲೆಕ್ಕ ಶಾಖೆ | ACT | ಲೆಕ್ಕ ಪತ್ರ ಹಾಗೂ ಲೆಕ್ಕ ಪತ್ರ ಪರಿ ಶೀಲನೆ, ನಗದು ನಿರ್ವಹಣೆ |
| 4 | ಲೆಕ್ಕ ತಪಾಸಣೆ | AUD | |
| 5 | ನಗದು ಶಾಖೆ | CASH | |
| 6 | ಕಾನೂನು ಕೋಶ | LGC | ನ್ಯಾಯಾಲಯ ಪ್ರಕರಣ |
| 7 | ಲೇಖನ ಸಾಮಾಗ್ರಿ | STN | ಲೇಖನ ಸಾಮಾಗ್ರಿ, ದೂರವಾಣಿ, ಸ್ವೀಕೃತಿ ಮತ್ತು ರವಾನೆ |
| 8 | ವಾಹನ ಶಾಖೆ | VEH | ವಾಹನ ನಿರ್ವಹಣೆ |

**4(ಬಿ) VII: ಪಾಲಿಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂಬಂದದಲ್ಲಿ ಇರುವ ಏರ್ಪಾಡು ಗಳು ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಖ್ಯವಾದ ವಿವರಗಳು**

ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಅವಶ್ಯಕತೆಗೆ ಅನುಗುಣವಾಗಿ ಸಾರ್ವಜನಿಕರಿಂದ ಬಂದ ಅಭಿಪ್ರಾಯ ಗಳನ್ನು ಪರಿಶೀಲಿಸಿ ಅಗತ್ಯ ನಿರ್ಧಾರ ತೆಗೆದುಕೊಳ್ಳಲಾಗುವುದು.

**4(ಬಿ)VIII:ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರಿಂದ ರಚಿಸಲ್ಪಡುವ ನಿಗಮ, ಕೌನ್ಸಿಲ್, ಬೋರ್ಡ್, ಸಮಿತಿ ಅಥವಾ ಇತರೆ ಬಾಡಿಗಳ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಳು ನಡೆಸುವ ಸಭೆ ಮತ್ತು ನಡವಳಿ ಗಳನ್ನು ಸಾರ್ವಜನಿಕರು ವೀಕ್ಷಿಸಬಹುದೇ ಅಥವಾ ಇಂತಹ ಸಭೆಗಳ ನಡವಳಿಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆಯೇ:**

**ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಜಿಲ್ಲಾ ಸಮಿತಿ**ಯಲ್ಲಿ ಈ ಕೆಳಗೆ ನಮೂದಿಸಿದ ಅಧ್ಯಕ್ಷರು ಮತ್ತು ಸದಸ್ಯರು ಮತ್ತು ಕಾರ್ಯದರ್ಶಿಗಳು ಇರುತ್ತಾರೆ.

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, - ಅಧ್ಯಕ್ಷರು
2. ಜಂಟಿ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ - ಸದಸ್ಯರು
3. ಉಪನಿರ್ದೇಶಕರು ಸಹಕಾರ ಇಲಾಖೆ - ಸದಸ್ಯರು
4. ಜಿಲ್ಲಾ ಮಾರುಕಟ್ಟೆ ಅಧಿಕಾರಿ - ಸದಸ್ಯರು
5. ತೋಟಗಾರಿಕೆ ಉಪನಿರ್ದೇಶಕರು, ದಕ್ಷಿಣ ಕನ್ನಡ ಜಿಲ್ಲೆ - ಸದಸ್ಯ ಕಾರ್ಯದರ್ಶಿ

**ಸೂಕ್ಷ್ಮ ನೀರಾವರಿ ಯೋಜನೆ ಜಿಲ್ಲಾ ಸಮಿತಿ**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, - ಅಧ್ಯಕ್ಷರು
2. ಲೀಡ್ ಬ್ಯಾಂಕ್ ಮ್ಯಾನೇಜರ್, ಜಿಲ್ಲಾ ಲೀಡ್ ಬ್ಯಾಂಕ್, ಮಂಗಳೂರು - ಸದಸ್ಯರು
3. ಇರಿಗೇಷನ್ ಎಸೋಸಿಯೇಷನ್ ಆಫ್ ಕರ್ನಾಟಕ - ಸದಸ್ಯರು
4. ಜಲ ಸಂಪನ್ಮೂಲ ಪರಿಣಿತರು, ಕೃಷಿ ವಿಜ್ಞಾನ ಕೇಂದ್ರ ಕಂಕನಾಡಿ ಮಂಗಳೂರು - ಸದಸ್ಯರು
5. ಕೃಷಿಕ ಸಮಾಜ ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ರೈತರ ಪ್ರತಿನಿಧಿಯಾಗಿ - ಸದಸ್ಯರು
6. ತೋಟಗಾರಿಕೆ ಉಪನಿರ್ದೇಶಕರು, ದಕ್ಷಿಣ ಕನ್ನಡ ಜಿಲ್ಲೆ - ಸದಸ್ಯ ಕಾರ್ಯದರ್ಶಿ

ಸಭೆಯ ನಡವಳಿಗಳನ್ನು ಸಾರ್ವಜನಿಕರು ವೀಕ್ಷಿಸಲು ಮುಕ್ತ ಅವಕಾಶವಿದೆ. ಪ್ರಸ್ತುತ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಸಮತಿ ರಚನೆ ಆಗಿರುವ ಕಾರಣ ಈ ಸಮಿತಿ ಅಸ್ತಿತ್ವದಲ್ಲಿ ಇರುವುದಿಲ್ಲ.

**4(ಬಿ) IX: ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ದೂರವಾಣಿ ವಿವರಗಳ ಪಟ್ಟಿ**

| ಕ್ರ.ಸಂ | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1 | ಅಟೆಂಡರ್ | ಶ್ರೀ ಬಿ.ಪುರುಷೋತ್ತಮ | 2423628 |
| 2 | ಅಟೆಂಡರ್ | ಶ್ರೀ ಸಿರಿಲ್ ರಾಬರ್ಟ್ ಡಿಸೋಜ | 2423628 |
| 3 | ತೋಟಗಾರಿಕೆ ಸಹಾಯಕರು | ಶ್ರೀಮತಿ ನೇತ್ರಾವತಿ | 2451327 |
| 4 | ವಾಹನ ಚಾಲಕರು | ಶ್ರೀ ಕೆ.ವಿ.ರಾಜನ್ | 2423628 |
| 5 | ದ್ವಿತೀಯ ದರ್ಜೆ ಸಹಾಯಕರು | ಶ್ರೀಮತಿ ವೀಣಾ | 2423628 |
| 6 | ಪ್ರಥಮ ದರ್ಜೆ ಸಹಾಯಕರು | ಶ್ರೀಮತಿ ಜಯಶ್ರೀ | 2423628 |
| 7 | ಅಧೀಕ್ಷಕರು | ಶ್ರೀ ಮತಿ ಯಶೋಧ ಪಿ.ಎಸ್ | 2423628 |
| 8 | ಸಹಾಯಕ ತೋಟಗಾರಿಕೆ ಅಧಿಕಾರಿ 1 | ಶ್ರೀ ದರ್ಶನ್ ಜಿ. | 2423628 |
| 9 | ಸಹಾಯಕ ತೋಟಗಾರಿಕೆ ಅಧಿಕಾರಿ 2 | ಕು. ಅರ್ಚನಾ | 2423628 |
| 10 | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇ.ಸ್ಥಾ.ಸ ) | ಶ್ರೀ ಕೆ. ಪ್ರವೀಣ್ | 2423628 |
| 11 | ತೋಟಗಾರಿಕೆ ಉಪ ನಿರ್ದೇಶಕರು | ಶ್ರೀ ಹೆಚ್. ಆರ್. ನಾಯ್ಕ್ | 2423628 |

**4(ಬಿ) (X) ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಡಿಸೆಂಬರ್ 2010 ಮಾಹೆಯ ವೇತನದ ವಿವರಗಳು**

| ಕ್ರ.ಸಂ. | ಹುದ್ದೆ | ಹೆಸರು | ಮೂಲ ವೇತನ |
|---|---|---|---|
| 1 | ಅಟೆಂಡರ್ | ಶ್ರೀ ಬಿ.ಪುರುಷೋತ್ತಮ | 16000.00 |
| 2 | ಅಟೆಂಡರ್ | ಶ್ರೀ ಸಿರಿಲ್ ರಾಬರ್ಟ್ ಡಿಸೋಜ | 19900.00 |
| 3 | ತೋಟಗಾರಿಕೆ ಸಹಾಯಕರು | ಶ್ರೀಮತಿ ನೇತ್ರಾವತಿ | 12750.00 |
| 4 | ವಾಹನ ಚಾಲಕರು | ಶ್ರೀ ಕೆ.ವಿ.ರಾಜನ್ | 19000.00 |
| 5 | ದ್ವಿತೀಯ ದರ್ಜೆ ಸಹಾಯಕರು | ಶ್ರೀಮತಿ ವೀಣಾ | 12750.00 |
| 6 | ಪ್ರಥಮ ದರ್ಜೆ ಸಹಾಯಕರು | ಶ್ರೀಮತಿ ಜಯಶ್ರೀ | 19000.00 |
| 7 | ಅಧೀಕ್ಷಕರು | ಶ್ರೀ ಮತಿ ಯಶೋಧ ಪಿ.ಎಸ್ | 26700.00 |
| 8 | ಸಹಾಯಕ ತೋಟಗಾರಿಕೆ ಅಧಿಕಾರಿ 1 | ಶ್ರೀ ದರ್ಶನ್ ಜಿ. | 22200.00 |
| 9 | ಸಹಾಯಕ ತೋಟಗಾರಿಕೆ ಅಧಿಕಾರಿ 2 | ಕು. ಅರ್ಚನಾ | 22200.00 |
| 10 | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇ.ಸ್ಥಾ.ಸ ) | ಶ್ರೀ ಕೆ. ಪ್ರವೀಣ್ | 35400.00 |
| 11 | ತೋಟಗಾರಿಕೆ ಉಪ ನಿರ್ದೇಶಕರು | ಶ್ರೀ ಹೆಚ್. ಆರ್. ನಾಯ್ಕ್ | 46500.00 |

**4(ಬಿ) (XI): ಆಯವ್ಯಯ ವಿತರಣೆ**

**2016-17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ನ ಯೋಜನೇತರದಡಿ ವಿತರಣೆ ಮಾಡಿರುವ ಅನುದಾನ**

| ಕ್ರ.ಸಂ. | ಇಲಾಖೆಯ ಹೆಸರು | ಲೆಕ್ಕ ಶೀರ್ಷಿಕೆ | ಮೊತ್ತ (ಲಕ್ಷಗಳಲ್ಲಿ) |
|---|---|---|---|
| 1 | ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, ಜಿ.ಪ.,ಮಂಗಳೂರು | 2435 (ಯೋಜನೇತರ) | 172.76 |

**2016-17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ನ ಯೋಜನೆಗಳಡಿ ವಿತರಣೆ ಮಾಡಿರುವ ಅನುದಾನ**

| ಕ್ರ.ಸಂ. | ಯೋಜನೆ | ಲೆಕ್ಕ ಶೀರ್ಷಿಕೆ | ಮೊತ್ತ (ಲಕ್ಷಗಳಲ್ಲಿ) |
|---|---|---|---|
| 1 | ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆ ವ್ಯವಸಾಯ ಯೋಜನೆ | 2435-00-101-0-02 | 0.99 |
| 2 | ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ | 2435-00-101-0-28 | 6.00 |
| 3 | ತೋಟಗಾರಿಕೆ ಕಟ್ಟಡಗಳು | 2435-00-101-0-32 | 15.00 |
| 4 | ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ | 2435-00-101-0-35 | 2.5 |
| 5 | ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ | 2435-00-101-0-36 | 4.98 |
| 6 | ಪ್ರಚಾರ ಮತ್ತು ಸಾಹಿತ್ಯ | 2435-00-101-0-38 | 8.50 |
| 7 | ಶೀಥಲಗೃಹಗಳಿಗೆ ವಿದ್ಯುತ್ ಸಹಾಯಧನ | 2435-00-101-0-39 | 0.00 |
| 8 | ಜೇನು ಸಾಕಾಣಿಕೆ | 2851-00-107-0-33 | 8.49 |
| | **ಒಟ್ಟು ಜಿಲ್ಲಾ ಪಂಚಾಯತ್ ಯೋಜನೆಗಳು** | | **46.46** |

**2016-17ನೇ ಸಾಲಿನಲ್ಲಿ ತಾಲೂಕು ಪಂಚಾಯತ್ ನ ಯೋಜನೆಗಳಡಿ ವಿತರಣೆ ಮಾಡಿರುವ ಅನುದಾನ**

| ಕ್ರ.ಸಂ. | ಯೋಜನೆ | ಲೆಕ್ಕ ಶೀರ್ಷಿಕೆ | ಮೊತ್ತ (ಲಕ್ಷಗಳಲ್ಲಿ) |
|---|---|---|---|
| 1 | ರೈತರಿಗೆ ತರಬೇತಿ | 2435-00-101-0-64 | 2.41 |
| 2 | ರೈತರಿಗೆ ಸಹಾಯ | 2435-00-101-0-62 | 11.94 |
| 3 | ವಿಶೇಷ ಘಟಕ ಯೋಜನೆ | 2225-00-101-0-64 | 1.30 |
| 4 | ಗಿರಿಜನ ಉಪ ಯೋಜನೆ | 2225-00-102-0-70 | 1.65 |
| **ಒಟ್ಟು ತಾಲೂಕು ಪಂಚಾಯತ್ ಯೋಜನೆಗಳು** | | | **17.30** |

**2016-17ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗಳಡಿ ವಿತರಣೆ ಮಾಡಿರುವ ಅನುದಾನ**

| ಕ್ರ.ಸಂ. | ಕಾರ್ಯಕ್ರಮ | ಮೊತ್ತ (ಲಕ್ಷಗಳಲ್ಲಿ) |
|---|---|---|
| 1. | ಬಾಳೆ ಪ್ರದೇಶ ವಿಸ್ತರಣೆ | 4.44 |
| 2 | ಅನಾನಸು ಪ್ರದೇಶ ವಿಸ್ತರಣೆ | 3.36 |
| 3 | ಕೋಕೋ ಪ್ರದೇಶ ವಿಸ್ತರಣೆ | 2.07 |
| 4 | ಗೇರು ಪ್ರದೇಶ ವಿಸ್ತರಣೆ | 8.35 |
| 5 | ಬಿಡಿ ಪುಷ್ಪಗಳ ಪ್ರದೇಶ ವಿಸ್ತರಣೆ( ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ) | 1.00 |
| 6 | ಕಾಳುಮೆಣಸು ಪ್ರದೇಶ ವಿಸ್ತರಣೆ | 3.16 |
| 7 | ಬಾಳೆ ನಿರ್ವಹಣೆ (ಮೊದಲನೇ ಕಂತು) | 2.56 |
| 8 | ಅನನಾಸು ನಿರ್ವಹಣೆ (ಮೊದಲನೇ ಕಂತು) | 1.4 |
| 9 | ಕೋಕೋ ನಿರ್ವಹಣೆ (ಮೊದಲನೇ ವರ್ಷ ಹಾಗೂ ಎರಡನೇ ವರ್ಷ) | 1.03 |
| 10 | ಗೇರು ನಿರ್ವಹಣೆ (ಮೊದಲನೇ ವರ್ಷ ಹಾಗೂ ಎರಡನೇ ವರ್ಷ) | 2.71 |
| 11 | ಗೇರು ಪುನಶ್ಚೇತನ | 0.86 |
| 12 | ಕಾಳುಮೆಣಸು ಪುನಶ್ಚೇತನ | 5.15 |
| 13 | ಕೃಷಿ ಹೊಂಡ | 3.9 |
| 14 | ಸಮಗ್ರ ಪೋಷಕಾಂಶಗಳ ನಿರ್ವಹಣೆ ಮತ್ತು ಕೀಟ ಮತ್ತು ರೋಗ ನಿರ್ವಹಣೆ | 16.79 |
| 15 | ಸಾವಯವ ಕೃಷಿ ಮತ್ತು ದೃಡೀಕರಣ | 13.54 |
| 16 | ಎರೆಹುಳ ಗೊಬ್ಬರ ಘಟಕ/ ಜೀವಸಾರ ಘಟಕ ನಿರ್ಮಾಣ | 1.83 |
| 17 | ಮಾನವ ಸಂಪನ್ಮೂಲ ಅಭಿವೃದ್ಧಿ | 9.38 |
| 18 | ಪರಾಗಸ್ಪರ್ಶ ಅಭಿವೃದ್ಧಿ ( ಜೇನು ಸಾಕಾಣಿಕೆ ) | 12.8 |
| 19 | ಮಿಷನ್ ಮ್ಯಾನೆಜ್‌ಮೆಂಟ್ | 3.17 |
| 20 | ಪ್ರಚಾರ ಮತ್ತು ಸಾಹಿತ್ಯ | 3.00 |
| **ಒಟ್ಟು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗಳು** | | **100.50** |

**2016-17ನೇ ಸಾಲಿನಲ್ಲಿ ರಾಜ್ಯವಲಯದ ಯೋಜನೆಗಳಡಿ ವಿತರಣೆ ಮಾಡಿರುವ ಅನುದಾನ**

| ಕ್ರ.ಸಂ. | ಯೋಜನೆ | ಲೆಕ್ಕ ಶೀರ್ಷಿಕೆ | ಮೊತ್ತ (ಲಕ್ಷಗಳಲ್ಲಿ) |
|---|---|---|---|
| 1 | ನಿರ್ದೇಶನ ಮತ್ತು ಆಡಳಿತ | 2401-00-001-2-01 | 1.63 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 2401-00-001-2-10 | 3.04 |
| 3 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ(ಹನಿನೀರಾವರಿ) | 2401-00-108-2-30 | 83.41 |
| 4 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ | 2401-00-108-2-51 | 23.03 |
| 5. | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ | 2401-00-111-0-08 | 241.62 |
| 6. | ಕೃಷಿ ಕೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | 2401-00-119-4-05 | 9.00 |
| 7. | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣಕ್ಕಾಗಿ ಯೋಜನೆ | 2401-00-119-6-02 | 8.95 |
| 8. | ತೋಟಾಗಾರಿಕೆ ಉದ್ಯಾನವನಗಳು ಮತ್ತು ತೋಟಗಳು | 2406-02-112-0-17 | 30.00 |
| 9. | ಮಧುವನ ಹಾಗೂ ಜೇನುಸಾಕಾಣಿಕೆ ಅಭಿವೃದ್ದಿ | 2851-00-200-0-01 | 16.75 |
| 10 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 2401-00-800-1-57 | 145.63 |
| **ಒಟ್ಟು ರಾಜ್ಯವಲಯ ಯೋಜನೆಗಳು** | | | **563.06** |

**2016-17ನೇ ಸಾಲಿನಲ್ಲಿ ಸೂಕ್ಷ್ಮನೀರಾವರಿ ಯೋಜನೆಗಳಡಿ ವಿತರಣೆ ಮಾಡಿರುವ ಅನುದಾನ**

| ಕ್ರ.ಸಂ. | ಕಾರ್ಯಕ್ರಮ | ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ತೆಂಗು ಬೆಳೆಯಲ್ಲಿ ಹನಿ ನೀರಾವರಿ | 2.398 |
| 2 | ಅಡಿಕೆ ಬೆಳೆಯಲ್ಲಿ ಹನಿ ನೀರಾವರಿ | 84.926 |
| 3 | ಇತರೆ ಬೆಳೆಗಳು | 0.693 |
| **ಒಟ್ಟು ಸೂಕ್ಷ್ಮ ನೀರಾವರಿ ಯೋಜನೆ** | | **88.087** |

**2016-17ನೇ ಸಾಲಿಗೆ ಇಲಾಖೆಯ ಎಲ್ಲಾ ಯೋಜನೆಗಳಡಿ ದಕ್ಷಿಣ ಕನ್ನಡ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನ**

| ಕ್ರ.ಸಂ. | ಯೋಜನೆಗಳು | ಜಿಲ್ಲೆಗೆ ನಿಗದಿಪಡಿಸಿದ ಒಟ್ಟು ಮೊತ್ತ |
|---|---|---|
| 1. | ಕೇಂದ್ರವಲಯದ ಯೋಜನೆಗಳು | 352.55 |
| 2 | ರಾಜ್ಯವಲಯದ ಯೋಜನೆಗಳು | 310.98 |
| 3 | ಜಿಲ್ಲಾ ವಲಯದ ಯೋಜನೆಗಳು | 46.46 |
| 4 | ತಾಲೂಕು ಪಂಚಾಯತ್ ಯೋಜನೆ | 17.30 |
| **ಒಟ್ಟು ಯೋಜನೆಗಳು** | | **727.29** |

**4(ಬಿ) (XII): ಸಹಾಯಧನದೊಂದಿಗೆ ನಡೆಸುವ ಯೋಜನೆಗಳು, ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮಂಜೂರಾದ ಹಣ**

**A. ಜಿಲ್ಲಾ ಪಂಚಾಯತ್ ಯೋಜನೆಗಳು**

## 1. ಶೈತ್ಯಾಗಾರಗಳಿಗೆ ಧನ ಸಹಾಯ ಯೋಜನೆ.

1) ಯೋಜನೆ ಹೆಸರು :ಶೈತ್ಯಾಗಾರಗಳಿಗೆ ಧನ ಸಹಾಯ ಯೋಜನೆ

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ :ಪ್ರಸ್ತುತ ಜಿಲ್ಲೆಯಲ್ಲಿರುವ ಖಾಸಗಿವಲಯದ ಶೀತಲಗೃಹಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ರೈತ ಸಮೂಹದ ಪದಾರ್ಥಗಳನ್ನು ಸಂರಕ್ಷಿಸುವ ಮೂಲ ಉದ್ದೇಶದಿಂದ ಕಾರ್ಯನಿರ್ವಹಿಸಲು ಪ್ರೇರೇಪಿಸುವ ಸಲುವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

4) ಭೌತಿಕ ಹಾಗೂ ಆರ್ಥಿಕ ಗುರಿ : ಭೌತಿಕ ಹಾಗೂ ಆರ್ಥಿಕ ಗುರಿ ನಿಗದಿಯಾಗಿರುವುದಿಲ್ಲ. .

5) ಫಲಾನುಭವಿಯ ಅರ್ಹತೆ : 1.ಚಾಲನೆಯಲ್ಲಿರುವ ಶೀಥಲಗೃಹಗಳು ಮಾತ್ರ ವಿದ್ಯುತ್ ಸಹಾಯಧನಕ್ಕೆ ಅರ್ಹವಾಗಿರುತ್ತದೆ.

2.ಶೀಥಲಗೃಹಗಳ ಒಟ್ಟು ಶೇಕರಣಾ ಸಾಮರ್ಥ್ಯದ ಶೇಕಡ 75 ರಷ್ಟು ಪದಾರ್ಥಗಳು ತೋಟಗಾರಿಕೆ ಉತ್ಪನ್ನಗಳಾಗಿರಬೇಕು.

6) ಅನುದಾನ ಪಡೆಯಲು ಮಾನದಂಡ : 1.ವಿದ್ಯುಚ್ಚಕ್ತಿಯ ಸಹಾಯಧನವನ್ನು ಪಡೆಯಲಿಚ್ಚಿಸುವ ಶೀತಲಗೃಹಗಳ ಮಾಲೀಕರು ಕಡ್ಡಾಯವಾಗಿ ಇಲಾಖೆಯಲ್ಲಿ ನೊಂದಣಿಮಾಡಿಸತಕ್ಕದ್ದು.

2.ಶೀಥಲಗೃಹಗಳನ್ನು ಚಾಲನೆಯಲ್ಲಿ ಇಟ್ಟಿರಬೇಕು.

3.ಆಯಾ ಮಾಹೆಯಲ್ಲಿ ಶೇ.75ರಷ್ಟು ತೋಟಗಾರಿಕೆ ಉತ್ಪನ್ನಗಳನ್ನು ಶೇಖರಿಸಬೇಕು/ನಿರ್ವಹಿಸಿರಬೇಕು.

4.ಶೀಥಲಗೃಹದ ಮಾಲೀಕರು ತೋಟಗಾರಿಕೆ ಉತ್ಪನ್ನಗಳನ್ನು ಶೇಖರಿಸಿದ ಮಾಹೆಯಲ್ಲಿ KPTCL ಗೆ ಪಾವತಿಸಿದ ವಿದ್ಯುತ್ ಬಿಲ್ಲುಗಳನ್ನು ಸಹಾಯಧನ ಪಡೆಯಲು ಸಲ್ಲಿಸಬೇಕು.

7)ಅನುದಾನದ ವಿವರಣೆ :ಶೀಥಲಗೃಹಗಳು ಬಳಸುವ ಪ್ರತೀ ಯೂನಿಟ್ ವಿದ್ಯುತ್ ಗೆ ರೂ.1.00ರ ಸಹಾಯಧನ ನೀಡಲಾಗುವುದು.

8) ಅನುದಾನ ವಿತರಿಸುವ ಪ್ರಕ್ರಿಯೆ : ಶೀತಲಗೃಹಗಳು ವಾಣಿಜ್ಯವಾಗಿ ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ಸಹಾಯಧನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

## 2. ಜೇನು ಸಾಕಾಣಿಕೆ

1) ಯೋಜನೆಯ ಹೆಸರು : ಜೇನುಸಾಕಾಣಿಕೆ

2) ಯೋಜನೆಯ ವರ್ಷ :2016-17

3) ಯೋಜನೆಯ ಉದ್ದೇಶ :ತೋಟಗಾರಿಕೆ ಬೆಳೆಗಳ ಪರಾಗಸ್ಪರ್ಶ ವೃದ್ಧಿಸಲು ಜೇನುಹುಳುಗಳ ಸಂಖ್ಯೆಯನ್ನು ಅಭಿವೃದ್ಧಿ ಪಡಿಸುವುದು. ಫಲಾನುಭವಿಗೆ ಉಪ ಆದಾಯದ ಅವಕಾಶವನ್ನು ಒದಗಿಸುವುದು.

4)ಭೌತಿಕ ಹಾಗೂ ಆರ್ಥಿಕ ಗುರಿ : 647 ಫಲಾನುಭವಿಗಳು ಹಾಗೂ ರೂ. 8.49 ಲಕ್ಷಗಳು

5) ಫಲಾನುಭವಿಯ ಅರ್ಹತೆ :1. ಫಲಾನುಭವಿಯು ಜೇನುಕೃಷಿಯಲ್ಲಿ ಆಸಕ್ತಿ ಹೊಂದಿರಬೇಕು.

2. ಫಲಾನುಭವಿಯು ತೋಟಗಾರಿಕೆ ಬೆಳೆಯನ್ನು ಬೆಳೆಯುವಲ್ಲಿ ಆಸಕ್ತಿ ಹೊಂದಿರಬೇಕು.

3. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಾಗೂ .ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಆದ್ಯತೆ ನೀಡಲಾಗುವುದು

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಯು ಸ್ವಂತ ಖರ್ಚಿನಲ್ಲಿ ಮೊದಲಿಗೆ ಜೇನು ಪೆಟ್ಟಿಗೆ ಹಾಗೂ ಕಾಲೋನಿಗಳನ್ನು ಖರೀದಿಸಿ ತಮ್ಮ ಜಮೀನಿನಲ್ಲಿ ಸ್ಥಾಪಿಸಿರಬೇಕು. ನಂತರ ಖರೀದಿ ವೋಚರ್‌ಗಳೊಂದಿಗೆ ಅರ್ಜಿ ಸಲ್ಲಿಸಬೇಕು.

7) ಅನುದಾನದ ವಿವರಣೆ : ಫಲಾನುಭವಿಯು ಭರಿಸಿದ ವೆಚ್ಚದ ಮೇಲೆ ಶೇ 40 ರ ಸಹಾಯಧನ ಮಾರ್ಗಸೂಚಿಯ ಮಿತಿಗೊಳಪಟ್ಟು ಗರಿಷ್ಠ ರೂ. 1800 ಸಾಮಾನ್ಯವರ್ಗದ ಫಲಾನುಭವಿಗಳಿಗೆ ಹಾಗೂ ರೂ. 4050 ಪರಿಶಿಷ್ಟ ಜಾತಿ /ಪಂಗಡದ ರೈತರಿಗೆ ಸಹಾಯಧನ ನೀಡಲಾಗುವುದು.

## 3. ರೈತರಿಗೆ ತರಬೇತಿ ಯೋಜನೆ.

1) ಯೋಜನೆ ಹೆಸರು :**ರೈತರಿಗೆ ತರಬೇತಿ ಯೋಜನೆ.**

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ :ತೋಟಗಾರಿಕೆ ಅಭಿವೃದ್ದಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ವಿವಿಧ ಪ್ರಕಾರಗಳಲ್ಲಿ ರೈತರಿಗೆ ತಲುಪಿಸುವುದು ಹಾಗೂ ಅವರಲ್ಲಿ ಸ್ಪರ್ಧಾತ್ಮಕ ಮನೋಭಾವಗಳನ್ನು ಬೆಳೆಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :ಭೌತಿಕ ಗುರಿ:625 ರೈತ ಫಲಾನುಭವಿಗಳು. ಆರ್ಥಿಕ ಗುರಿ:2.50ಲಕ್ಷಗಳು.

5) ಫಲಾನುಭವಿಯ ಅರ್ಹತೆ : 1.ತರಬೇತಿ ಕಾರ್ಯಕ್ರಮಕ್ಕೆ ಆಸಕ್ತ ರೈತರನ್ನು ಹೆಚಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ ನೀಡಲಾಗುವುದು.ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ನಿಯಮಾನುಸಾರ ಆಯ್ಕೆ ಕಡ್ಡಾಯವಾಗಿರುತ್ತದೆ.

2.ಫಲಾನುಭವಿಯು ಗ್ರಾಮಪಂಚಾಯತ್ ನಿಂದ ಆಯ್ಕೆಯಾಗಿರಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿ ಇಲಾಖೆ ಆಯೋಜಿಸಿದ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿ ಭಾಗವಹಿಸುವುದು.

7)ಅನುದಾನದ ವಿವರಣೆ :ತರಬೇತಿ ಸಮಯದಲ್ಲಿ ಪ್ರತಿ ರೈತರಿಗೆ ಎರಡು ದಿವಸಗಳ ಅವಧಿಗೆ ರೂಪಾಯಿ.400.00 ರಂತೆ ಖರ್ಚು ಭರಿಸಲಾಗುವುದು.

## 4. ರೈತರಿಗೆ ಸಹಾಯ ಯೋಜನೆ.

1) ಯೋಜನೆ ಹೆಸರು :**ರೈತರಿಗೆ ಸಹಾಯ ಯೋಜನೆ**

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ :1.ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ.

2.ಕೀಟ ಮತ್ತು ರೋಗಗಳ ನಿಯಂತ್ರಣೆ.

4) ಭೌತಿಕ ಹಾಗೂ ಆರ್ಥಿಕ ಗುರಿ : ಪ್ರದೇಶ ವಿಸ್ತರಣೆ ಕಾಂಪೋನೆಂಟ್ ನಡಿ ಭೌತಿಕ ಗುರಿ 500 ಯೂನಿಟ್ ಗಳು ಆರ್ಥಿಕ ಗುರಿ 5.00 ಲಕ್ಷಗಳು

ಸಸ್ಯಸಂರಕ್ಷಣೆ ಔಷಧಿಗಳ ಖರೀದಿಗೆ ಶೇ.50ರ ಸಹಾಯಧನದಡಿ ಭೌತಿಕ ಗುರಿ 188 ಫಲಾನುಭವಿಗಳು ಆರ್ಥಿಕ ಗುರಿ 3.93 ಲಕ್ಷಗಳು

5) ಫಲಾನುಭವಿಯ ಅರ್ಹತೆ : 1. ಸ್ವಂತ ಜಮೀನು ಹೊಂದಿರಬೇಕು.

2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ/ ಸಣ್ಣ ಅತೀ ಸಣ್ಣ / ಮಹಿಳಾ ಫಲಾನುಭವಿಗಳಿಗೆ ನಿಯಮಾನುಸಾರ ಆಧ್ಯತೆ ನೀಡಲಾಗುವುದು.

3.ಫಲಾನುಭವಿಯು ಗ್ರಾಮಪಂಚಾಯತ್ ನಿಂದ ಆಯ್ಕೆಯಾಗಿರಬೇಕು.

6) ಅನುದಾನ ಪಡೆಯಲು ಮಾನದಂಡ : ಸಂಬಂಧಿಸಿದ ಗ್ರಾಮ ಪಂಚಾಯತ್ ನಿಂದ ಶಿಫಾರಸ್ಸು ಮಾಡಿದ ಅರ್ಜಿಯನ್ನು ತನ್ನ ಜಮೀನಿನ ದಾಖಲೆಗಳೊಂದಿಗೆ ಸಹಾಧನಕ್ಕಾಗಿ ಸಲ್ಲಿಸಬೇಕು.

7)ಅನುದಾನದ ವಿವರಣೆ :**1. ಪ್ರದೇಶ ವಿಸ್ತರಣೆ**: ಪ್ರತೀ ಫಲಾನುಭವಿಗೆ ಗರಿಷ್ಟ ಒಂದು ಎಕರೆ ಪ್ರದೇಶಕ್ಕೆ ಸರಿದೂಗುವಷ್ಟು ಹಣ್ಣಿನ ಗಿಡಗಳ ಅಥವಾ ಇತರೆ ಬಹುವಾರ್ಷಿಕ ಗಿಡಗಳ ಪೂರೈಕೆ ಮಾಡಲಾಗುವುದು.ಫಲಾನುಭವಿಗೆ ನೀಡುವ ಸೌಲಭ್ಯದ ಗರಿಷ್ಟ ಘಟಕ ವೆಚ್ಚ ರೂ.1000ಗಳು.

**2.ಶೇ.50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ**:ಪ್ರತೀ ಫಲಾನುಭವಿಗೆ ತರಕಾರಿ ಹಾಗೂ ಹೂವಿನ ಬೆಳೆಗಳಿಗೆ ಶೇ.50ರ ರಿಯಾಯಿತಿಯಲ್ಲಿ ಗರಿಷ್ಠ ಮೊತ್ತ ರೂ.2000 /ಹೆ. ಸಹಾಯಧನ ಸೌಲಭ್ಯವನ್ನು ನೀಡಲಾಗುವುದು.

8) ಅನುದಾನ ವಿತರಿಸುವ ಪ್ರಕ್ರಿಯೆ : ಗಿಡಗಳನ್ನ ವಿತರಿಸುವಾಗ ಸಣ್ಣ ಪುಟ್ಟ ಸರಳ ಸಮಾರಂಭಗಳನ್ನು ಏರ್ಪಡಿಸಿ ,ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚುನಾಯಿತ ಪ್ರತಿನಿಧಿಗಳನ್ನು ಆಹ್ವಾನಿಸಿ ,ಅವರ ಸಮಕ್ಷಮದಲ್ಲಿ ವಿತರಿಸಲಾಗುವುದು. ಸಹಾಯಧನಕ್ಕೆ ಸಸ್ಯ ಸಂರಕ್ಷಣೆ ಔಷಧಿ ಖರೀದಿಸಿದ ಬಿಲ್ಲುಗಳನ್ನು ಹಾಜರುಪಡಿಸಬೇಕು

**B. ರಾಜ್ಯವಲಯದ ಯೋಜನೆಗಳು**

## 1. ತೋಟಗಾರಿಕೆ ಬೆಳೆಗಳ ಹಾನಿಕಾರಕ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣೆ ಯೋಜನೆ.

### ಅ. ಗೋನಿಯೋಜಸ್ ಪರೋಪ ಜೀವಿಗಳ ಉತ್ಪಾದನೆ

1) ಕಾರ್ಯಕ್ರಮದ ಹೆಸರು : ಗೋನಿಯೋಜಸ್ ಪರೋಪ ಜೀವಿಗಳ ಉತ್ಪಾದನೆ

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ : ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣೆ

4) ಭೌತಿಕ ಹಾಗೂ ಆರ್ಥಿಕ ಗುರಿ : ಭೌತಿಕ ಗುರಿ 8.00 ಲಕ್ಷಗಳು ಆರ್ಥಿಕ ಗುರಿ 2.00 ಲಕ್ಷಗಳು

5) ಫಲಾನುಭವಿಯ ಅರ್ಹತೆ : ತೀವ್ರವಾಗಿ ಕಪ್ಪು ತಲೆ ಹುಳುವಿನ ಬಾಧೆಗೊಳಗಾದ ತೆಂಗಿನ ತೋಟಗಳಿಗೆ ಆಧ್ಯತೆ ಮೇರೆಗೆ ಬಿಡುಗಡೆ ಮಾಡಲಾಗುವುದು.

### ಆ.ರೋಗ/ ಕೀಟಗಳ ಸಮಗ್ರ ನಿಯಂತ್ರಣೆಗೆ ಸಸ್ಯ ಸಂರಕ್ಷಣಾ ರಾಸಾಯನಿಕಗಳು ಜೈವಿಕ ಪೀಡೆ ನಾಶಕಗಳು, ಫಿರಮೋನ್ ಟ್ರಾಪ್ಸ್‌ಗಳ ವಿತರಣೆ

1) ಯೋಜನೆ ಹೆಸರು : ರೋಗ/ ಕೀಟಗಳ ಸಮಗ್ರ ನಿಯಂತ್ರಣೆಗೆ ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜೈವಿಕ ಪೀಡೆ ನಾಶಕಗಳು, ಫಿರಮೋನ್ ಟ್ರಾಪ್ಸ್‌ಗಳ ವಿತರಣೆ

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ : ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣೆ

4) ಭೌತಿಕ ಹಾಗೂ ಆರ್ಥಿಕ ಗುರಿ : ಭೌತಿಕ ಗುರಿ 315.27 ಆರ್ಥಿಕ ಗುರಿ 6.55 ಲಕ್ಷಗಳು

5) ಫಲಾನುಭವಿಯ ಅರ್ಹತೆ : ರೈತರು ಸ್ವಂತ ಜಮೀನಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರಬೇಕು.

7)ಅನುದಾನದ ವಿವರಣೆ : ಈ ಯೋಜನೆಯಡಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ಇತರೆ ವರ್ಗದವರಿಗೆ ಖಿಟ್ಟಾರೆ ದರದ ಶೇ.50 ರಷ್ಟು 2000

ಹಾಗೂ ಪ.ಜಾತಿ/ಪ.ಪಂಗಡದವರಿಗೆ ಶೇ. 90 ರಷ್ಟು ಗರಿಷ್ಠ ರೂ. 3600 ಗಳ ಮೌಲ್ಯದ ಔಷಧಿಗಳನ್ನು ವಿತರಿಸುವುದು.

8) ಅನುದಾನ ವಿತರಿಸುವ ಪ್ರಕ್ರಿಯೆ : ರೈತರಿಗೆ ಪರಿಕರಗಳನ್ನು ನೀಡಲಾಗುವುದು.ಪರಿಕರಗಳನ್ನು ಅವರೇ ಖರೀದಿಸಿದ್ದಲ್ಲಿ ಒಟ್ಟಾರೆ ದರದ ಶೇ.50 ರಷ್ಟು ಗರಿಷ್ಠ ರೂ.2000 ಗಳ ಅನುದಾನವನ್ನು ಚೆಕ್ ಮುಖಾಂತರ ನೇರವಾಗಿ ವಿತರಿಸಲಾಗುವುದು.

## 2. ಸಮಗ್ರ ತೋಟಗಾರಿಕೆ ಅಭಿವೃದ್ದಿ ಯೋಜನೆ

1) ಯೋಜನೆ ಹೆಸರು : ಸಮಗ್ರ ತೋಟಗಾರಿಕೆ ಅಭಿವೃದ್ದಿ ಯೋಜನೆ

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ : ತೋಟಗಾರಿಕೆ ಬೆಳೆಗಳನ್ನು ಗುಚ್ಛ ಮಾದರಿಯಲ್ಲಿ ರೈತರ ಜಮೀನುಗಳಲ್ಲಿ ಅಭಿವೃದ್ದಿ ಪಡಿಸುವುದು. ಬೆಳೆಗಳ ಅಭಿವೃದ್ದಿಗೆ ಎಲ್ಲಾ ಹಂತಗಳನ್ನು ಉತ್ತೇಜಿಸುವುದು. ಈ ಬೆಳೆಗಳನ್ನು ಬೆಳೆಯಲು ಬೇಕಾದ ತಾಂತ್ರಿಕ ಜ್ಞಾನವನ್ನು ನೀಡಿ ತೋಟಗಾರಿಕಾ ಬೆಳೆಗಳ ಉತ್ಪನ್ನ ಗಳನ್ನು ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : ಭೌತಿಕ ಗುರಿ 145.877 ಹೆಕ್ಟೇರು ಆರ್ಥಿಕ ಗುರಿ 95.20 ಲಕ್ಷರೂ

5) ಫಲಾನುಭವಿಯ ಅರ್ಹತೆ :1. ಫಲಾನುಭವಿ ರೈತರು ಸ್ವಂತ ಜಮೀನು ಹೊಂದಿರಬೇಕು. ಪ್ರದೇಶ ವಿಸ್ತರಣೆ ಹೊರತುಪಡಿಸಿ ಇತರೆ ಸವಲತ್ತು ಪಡೆಯಲು ಈಗಾಗಲೇ ತೋಟಗಾರಿಕೆ ಬೆಳೆಗಳನ್ನು ಬೆಳೆದಿರಬೇಕು.

2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಇದೇ ಉದ್ದೇಶಕ್ಕಾಗಿ ಸಹಾಯಧನ ಪಡೆಯದೇ ಇರುವ ರೈತರು ಈ ಯೋಜನೆಯಲ್ಲಿ ಫಲಾನುಭವ ಪಡೆಯಲು ಅರ್ಹರಾಗಿರುತ್ತಾರೆ.

3. ಫಲಾನುಭವಿಗಳು ಮೊದಲಿಗೆ ಸ್ವಂತ ಖರ್ಚಿನಲ್ಲಿ ಸವಲತ್ತುಗಳನ್ನು ಅನುಷ್ಠಾನಿಸಬೇಕು. ನಂತರ ಖರ್ಚಿನ ವೋಚರ್‌ಗಳೊಂದಿಗೆ ನಿಯಮಾನುಸಾರ ಅರ್ಜಿ ಸಲ್ಲಿಸಬೇಕು.

4. ಮೊದಲು ಬಂದವರಿಗೆ ಜೇಷ್ಠತೆ ಅನುಸಾರ ನಿಯಮ ಪ್ರಕಾರ ಸೌಲಭ್ಯ ಒದಗಿಸಲಾಗುವುದು.

6) ಅನುದಾನ ಪಡೆಯಲು ಮಾನದಂಡ : 1ಫಲಾನುಭವಿಗಳು ಮೊದಲಿಗೆ ಸ್ವಂತ ಖರ್ಚಿನಲ್ಲಿ ಸವಲತ್ತುಗಳನ್ನು ಅನುಷ್ಠಾನಿಸಬೇಕು. ನಂತರ ಖರ್ಚಿನ ವೋಚರ್‌ಗಳೊಂದಿಗೆ ನಿಯಮಾನುಸಾರ ಅರ್ಜಿ ಸಲ್ಲಿಸಬೇಕು.

7)ಅನುದಾನದ ವಿವರಣೆ : 1.ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಡಿ ಕಾಳುಮೆಣಸು ಅಥವಾ ಕೋಕೋ ಬೆಳೆಯನ್ನು ಅಭಿವೃದ್ದಿ ಪಡಿಸಲು ಇಚ್ಛಿಸುವ ರೈತರಿಗೆ ಖಿಟ್ಟು ಬೇಸಾಯ ವೆಚ್ಚದಲ್ಲಿ ಶೇ.90 ರಂತೆ ಪ್ರತೀ ಹೆಕ್ಟೇರ್‌ಗೆ ಸಹಾಯಧನ ನೀಡಲಾಗುವುದು.

2.ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಫಲಾನುಭವಿಗಳಿಗೆ ಕೊಯ್ಲೋತ್ತರ ನಿರ್ವಹಣೆಯಲ್ಲಿ ಬರುವ ನಷ್ಟವನ್ನು ಕಡಿಮೆಗೊಳಿಸಲು ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ಪ್ಲಾಸ್ಟಿಕ್ ಕ್ರೇಟ್‌ಗಳ ಖರೀದಿಗೆ ಶೇ 50 ರ ಸಹಾಯಧನ ನೀಡಲಾಗುವುದು.

3. ಫಲಾನುಭವಿ ರೈತರಿಗೆ ದಿನವೊಂದ ರ ಗರಿಷ್ಠ ರೂ 400 ವೆಚ್ಚದಲ್ಲಿ ತೋಟಗಾರಿಕೆ ಬೆಳೆಗಳ ಅಭಿವೃದ್ದಿಯ ವಿವಿಧ ಮಜಲುಗಳಲ್ಲಿ ತಾಂತ್ರಿಕ ತರಬೇತಿ ನೀಡಲಾಗುವುದು.

## 3.ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿ

1) ಯೋಜನೆ ಹೆಸರು : ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿ

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ : ನಗರ ಪ್ರದೇಶದಲ್ಲಿ ವಾಸಿಸುವ ಸಾರ್ವಜನಿಕರು ತಮ್ಮಲ್ಲಿ ಲಭ್ಯವಿರುವ ಅಲ್ಪ ಸ್ಥಳದಲ್ಲಿ ತರಕಾರಿ ಹಣ್ಣುಗಳನ್ನು ಬೆಳೆದು ವಿಷಮುಕ್ತ ಆಹಾರ ಸೇವನೆಗೆ ಉತ್ತೇಜಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : ಭೌತಿಕ ಗುರಿ 588 ಫಲಾನುಭವಿಗಳು ಆರ್ಥಿಕ ಗುರಿ 6.175 ಲಕ್ಷರೂ

5) ಫಲಾನುಭವಿಯ ಅರ್ಹತೆ :1. ಈ ಯೋಜನೆಯಲ್ಲಿ ಸವಲತ್ತು ಪಡೆಯುವ ರೈತರು ನಗರ ಅಥವಾ ಪಟ್ಟಣ ಪ್ರದೇಶ ವಾಸಿಗಳಾಗಿರಬೇಕು

2. ತಮ್ಮ ಮನೆಗಳಲ್ಲಿ ಲಭ್ಯವಿರುವ ಜಾಗದಲ್ಲಿ ಕೈತೋಟ ಅಥವಾ ತಾರಸಿ ತೋಟ ಬೆಳೆಯಲು ಆಸಕ್ತಿ ಹೊಂದಿರಬೇಕು.

6) ಅನುದಾನ ಪಡೆಯಲು ಮಾನದಂಡ : 1.ಫಲಾನುಭವಿಯು ಮೊದಲಿಗೆ ಇಲಾಖೆಯ ಮಾರ್ಗಸೂಚಿ ಅನುಸಾರ ಇಲಾಖೆಯಿಂದ ಒದಗಿಸುವ ಸೌಲ್ಭ್ಯಗಳಲ್ಲದೇ ಉಳಿಕೆ ಅಗತ್ಯ ಸವಲತ್ತುಗಳನ್ನು ಸ್ವಂತ ಖರ್ಚಿನಲ್ಲಿ ಮಾಡಬೇಕು.

2. ಇಲಾಖೆಯ ಮಾರ್ಗದರ್ಶನದಲ್ಲಿ ಕೈತೋಟ ಅಥವಾ ತಾರಸಿ ತೋಟಗಳನ್ನು ಅಭಿವೃದ್ಧಿಪಡಿಸಬೇಕು.

7)ಅನುದಾನದ ವಿವರಣೆ : 1.ಕೈತೋಟ ಬೆಳೆಸುವ ಫಲಾನುಭವಿಗಳಿಗೆ ಇಲಾಖೆಯಿಂದ ಶೇ 50 ರ ಸಹಾಯಧನದಲ್ಲಿರೂ. 250 ರ ಮಿನಿಕಿಟ್‌ಗಳನ್ನು ವಿತರಿಸಲಾಗುವುದು. ತಾರಸಿ ತೋಟದ ಫಲಾನುಭವಿಗಳಿಗೆ ಶೇ 50 ರ ಸಹಾಯಧನದಲ್ಲಿ ರೂ. 1000 ಗಳ ಮಿನಿಕಿಟ್‌ಗಳನ್ನು ವಿತರಿಸಲಾಗುವುದು

2.ಕೈತೋಟ ಅಥವಾ ತಾರಸಿ ತೋಟ ಬೆಳೆಯಲು ಇಲಾಖೆಯಿಂದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತರಬೇತಿ ನೀಡಲಾಗುವುದು.

## 4. ಪರಿಶಿಷ್ಟ ಜಾತಿ / ಪಂಗಡಗಳ ರೈತರ ಸರ್ವತೋಮುಖ ಅಭಿವೃದ್ಧಿ ಯೋಜನೆ

1) ಯೋಜನೆ ಹೆಸರು : ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ(ಪರಿಶಿಷ್ಟ ಜಾತಿ/ಪಂಗಡಗಳ ರೈತರ ಸರ್ವತೋಮುಖ ಅಭಿವೃದ್ಧಿ ಯೋಜನೆ)

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ : ತೋಟಗಾರಿಕೆ ಬೆಳೆಗಳನ್ನು ಗುಚ್ಛ ಮಾದರಿಯಲ್ಲಿ ರೈತರ ಜಮೀನುಗಳಲ್ಲಿ ಅಭಿವೃದ್ಧಿ ಪಡಿಸುವುದು. ಬೆಳೆಗಳ ಅಭಿವೃದ್ಧಿಗೆ ಎಲ್ಲಾ ಹಂತಗಳನ್ನು ಉತ್ತೇಜಿಸುವುದು. ಈ ಬೆಳೆಗಳನ್ನು ಬೆಳೆಯಲು ಬೇಕಾದ ತಾಂತ್ರಿಕ ಜ್ಞಾನವನ್ನು ನೀಡಿ ತೋಟಗಾರಿಕಾ ಬೆಳೆಗಳ ಉತ್ಪನ್ನ ಗಳನ್ನು ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : ಭೌತಿಕ ಗುರಿ 4.80 ಹೆಕ್ಟೇರು ಆರ್ಥಿಕ ಗುರಿ 5.0 ಲಕ್ಷರೂ

5) ಫಲಾನುಭವಿಯ ಅರ್ಹತೆ :1. ಫಲಾನುಭವಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಠ ಪಂಗಡಕ್ಕೆ ಸೇರಿದವರಾಗಿರಬೇಕು.

2.ಫಲಾನುಭವಿ ರೈತರು ಸ್ವಂತ ಜಮೀನು ಹೊಂದಿರಬೇಕು. ಪ್ರದೇಶ ವಿಸ್ತರಣೆ ಹೊರತುಪಡಿಸಿ ಇತರೆ ಸವಲತ್ತು ಪಡೆಯಲು ಈಗಾಗಲೇ ತೋಟಗಾರಿಕೆ ಬೆಳೆಗಳನ್ನು ಬೆಳೆದಿರಬೇಕು.

3. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಇದೇ ಉದ್ದೇಶಕ್ಕಾಗಿ ಸಹಾಯಧನ ಪಡೆಯದೇ ಇರುವ ರೈತರು ಈ ಯೋಜನೆಯಲ್ಲಿ ಫಲಾನುಭವ ಪಡೆಯಲು ಅರ್ಹರಾಗಿರುತ್ತಾರೆ.

4. ಫಲಾನುಭವಿಗಳು ಮೊದಲಿಗೆ ಸ್ವಂತ ಖರ್ಚಿನಲ್ಲಿ ಸವಲತ್ತುಗಳನ್ನು ಅನುಷ್ಠಾನಿಸಬೇಕು. ನಂತರ ಖರ್ಚಿನ ವೋಚರ್‌ಗಳೊಂದಿಗೆ ನಿಯಮಾನುಸಾರ ಅರ್ಜಿ

ಸಲ್ಲಿಸಬೇಕು.

4. ಮೊದಲು ಬಂದವರಿಗೆ ಜೇಷ್ಠತೆ ಅನುಸಾರ ನಿಯಮ ಪ್ರಕಾರ ಸೌಲಭ್ಯ ಒದಗಿಸಲಾಗುವುದು.

6) ಅನುದಾನ ಪಡೆಯಲು ಮಾನದಂಡ : 1ಫಲಾನುಭವಿಗಳು ಮೊದಲಿಗೆ ಸ್ವಂತ ಖರ್ಚಿನಲ್ಲಿ ಸವಲತ್ತುಗಳನ್ನು ಅನುಷ್ಠಾನಿಸಬೇಕು. ನಂತರ ಖರ್ಚಿನ ವೋಚರ್‌ಗಳೊಂದಿಗೆ ನಿಯಮಾನುಸಾರ ಅರ್ಜಿ ಸಲ್ಲಿಸಬೇಕು.

7)ಅನುದಾನದ ವಿವರಣೆ : 1.ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಡಿ ಕಾಳುಮೆಣಸು ಅಥವಾ ಕೋಕೋ ಬೆಳೆಯನ್ನು ಅಭಿವೃದ್ದಿ ಪಡಿಸಲು ಇಚ್ಛಿಸುವ ರೈತರಿಗೆ ಬಿಟ್ಟು ಬೇಸಾಯ ವೆಚ್ಚದಲ್ಲಿ ಶೇ.90 ರಂತೆ ಪ್ರತೀ ಹೆಕ್ಟೇರ್‌ಗೆ ಸಹಾಯಧನ ನೀಡಲಾಗುವುದು.

2.ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಫಲಾನುಭವಿಗಳಿಗೆ ಕೊಯ್ಲೋತ್ತರ ನಿರ್ವಹಣೆಯಲ್ಲಿ ಬರುವ ನಷ್ಟವನ್ನು ಕಡಿಮೆಗೊಳಿಸಲು ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲು ಯಂತ್ರೋಪಕರಣಗಳ ಖರೀದಿಗೆ ಶೇ 90 ರ ಸಹಾಯಧನ ನೀಡಲಾಗುವುದು.

3. ಫಲಾನುಭವಿ ರೈತರಿಗೆ ಅಭಿವೃದ್ದಿ ಪಡಿಸಿದ ಬೆಳೆಗೆ ನೀರಾವರಿ ಉತ್ತೇಜಿಸಲು ಶೇ 90 ರ ಸಹಾಯಧನದಲ್ಲಿ ಹನಿನೀರಾವರಿ ಅಳವಡಿಕೆಗೆ ಸಹಾಯಧನ ನೀಡಲಾಗುವುದು.

## 5. ಮಧುವನ ಹಾಗೂ ಜೇನುಸಾಕಾಣಿಕೆ

1) ಯೋಜನೆಯ ಹೆಸರು : ಮಧುವನ ಹಾಗೂ ಜೇನುಸಾಕಾಣಿಕೆ

2) ಯೋಜನೆಯ ವರ್ಷ :2016-17

3) ಯೋಜನೆಯ ಉದ್ದೇಶ :ತೋಟಗಾರಿಕೆ ಬೆಳೆಗಳ ಪರಾಗಸ್ಪರ್ಶ ವೃದ್ಧಿಸಲು ಜೇನುಹುಳುಗಳ ಸಂಖ್ಯೆಯನ್ನು ಅಭಿವೃದ್ಧಿ ಪಡಿಸುವುದು. ಫಲಾನುಭವಿಗೆ ಉಪ ಆದಾಯದ ಅವಕಾಶವನ್ನು ಒದಗಿಸುವುದು.

4)ಭೌತಿಕ ಹಾಗೂ ಆರ್ಥಿಕ ಗುರಿ : 554 ಫಲಾನುಭವಿಗಳು ಹಾಗೂ ರೂ. 16.75 ಲಕ್ಷಗಳು

5) ಫಲಾನುಭವಿಯ ಅರ್ಹತೆ :1. ಫಲಾನುಭವಿಯು ಜೇನುಕೃಷಿಯಲ್ಲಿ ಆಸಕ್ತಿ ಹೊಂದಿರಬೇಕು.

2. ಫಲಾನುಭವಿಯು ತೋಟಗಾರಿಕೆ ಬೆಳೆಯನ್ನು ಬೆಳೆಯುವಲ್ಲಿ ಆಸಕ್ತಿ ಹೊಂದಿರಬೇಕು.

3. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಾಗೂ .ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಆದ್ಯತೆ ನೀಡಲಾಗುವುದು

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಯು ಸ್ವಂತ ಖರ್ಚಿನಲ್ಲಿ ಮೊದಲಿಗೆ ಜೇನು ಪೆಟ್ಟಿಗೆ ಹಾಗೂ ಕಾಲೋನಿಗಳನ್ನು ಖರೀದಿಸಿ ತಮ್ಮ ಜಮೀನಿನಲ್ಲಿ ಸ್ಥಾಪಿಸಿರಬೇಕು. ನಂತರ ಖರೀದಿ ವೋಚರ್‌ಗಳೊಂದಿಗೆ ಅರ್ಜಿ ಸಲ್ಲಿಸಬೇಕು.

7) ಅನುದಾನದ ವಿವರಣೆ : 1. ಫಲಾನುಭವಿಯು ಭರಿಸಿದ ವೆಚ್ಚದ ಮೇಲೆ ಶೇ 40 ರ ಸಹಾಯಧನ ಮಾರ್ಗಸೂಚಿಯ ಮಿತಿಗೊಳಪಟ್ಟು ಗರಿಷ್ಠ ರೂ. 1800 ಸಾಮಾನ್ಯವರ್ಗದ ಫಲಾನುಭವಿಗಳಿಗೆ ಹಾಗೂ ರೂ. 4050 ಪರಿಶಿಷ್ಟ ಜಾತಿ /ಪಂಗಡದ ರೈತರಿಗೆ ಸಹಾಯಧನ ನೀಡಲಾಗುವುದು.

2. ಖಾಸಗಿ ಮಧುವನ ಸ್ಥಾಪಿಸಲು ಇಚ್ಚಿಸುವ ಫಲಾನುಭವಿಗೆ ಶೇ 50 ರ ಸಹಾಯಧನ ಗರಿಷ್ಠ ರೂ. 50000 ತನಕ ನೀಡಲಾಗುವುದು.

3. ಇಲಾಖೆಯ ವಶದಲ್ಲಿರುವ ಮಧುವನಗಳ ನಿರ್ವಹಣೆಗೆ ಮಾರ್ಗಸೂಚಿ ಅನುಸಾರ ವೆಚ್ಚ ಭರಿಸಲಾಗುವುದು

4. ಜೇನುಕೃಷಿಯಲ್ಲಿ ತೊಡಗಿಕೊಳ್ಳುವ ರೈತರಿಗೆ ಮಾರ್ಗಸೂಚಿ ಅನುಸಾರ ವೆಚ್ಚ ಭರಿಸಿ ತರಬೇತಿಯನ್ನು ನೀಡಲಾಗುವುದು.

## 6. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆಯಲ್ಲಿ ಯಾಂತ್ರೀಕರಣ ಯೋಜನೆ

1) ಯೋಜನೆ ಹೆಸರು : ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆಯಲ್ಲಿ ಯಾಂತ್ರೀಕರಣ ಯೋಜನೆ

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ :1. ಯಾಂತ್ರೀಕರಣದ ಮೂಲಕ ತೋಟಗಾರಿಕೆ ಬೆಳೆಗಳ ಬೇಸಾಯ ವೆಚ್ಚವನ್ನು ಕಡಿತಗೊಳಿಸುವುದು.
2. ಮಾನವ ದೈಹಿಕ ಶ್ರಮದ ಕಷ್ಟ ನಿಷ್ಠುರ ಕಡಿಮೆ ಮಾಡಿ ತೋಟಗಾರಿಕೆ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : ಭೌತಿಕ ಗುರಿ 1031.50 ಸಂಖ್ಯೆಗಳು ಹಾಗೂ ಆರ್ಥಿಕ ಗುರಿ 145.64 ಲಕ್ಷ

5) ಫಲಾನುಭವಿಯ ಅರ್ಹತೆ :1. ಸ್ವತ: ತೋಟಗಾರಿಕೆಯಲ್ಲಿ ನಿರತರಾಗಿರುವ ರೈತರನ್ನು ಫಲಾನುಭವಿಗಳೆಂದು ಪರಿಗಣಿಸಲಾಗುವುದು.
2. ಸರಕಾರದ ನಿಯಮಾನುಸಾರ ಮೀಸಲಾತಿಗಳನ್ನು ಅನುಸರಿಸಿ ಸೌಲಭ್ಯ ನೀಡಲಾಗುವುದು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಯು ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿರಬೇಕು ಹಾಗೂ ವ್ಯಾಟ್ ಪಾವತಿಸುವ ಸಂಸ್ಥೆಯಿಂದ ಯಂತ್ರ/ಉಪಕರಣಗಳನ್ನು 2016-17ನೇ ಸಾಲಿನಲ್ಲಿ ಖರೀದಿಸಿರಬೇಕು.

7)ಅನುದಾನದ ವಿವರಣೆ : ಪ್ರತಿ ಫಲಾನುಭವಿಗೆ ಖರ್ಚಾದ ಸಹಾಯಧನದ ಮಿತಿ ಶೇ.50 ರಷ್ಟು **ಗರಿಷ್ಠ ರೂ.50000** ದ ವರೆಗೆ ಮಾತ್ರ.

## 7. ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ

1) ಯೋಜನೆ ಹೆಸರು : ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ.

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ : ತೆಂಗು ಬೆಳೆಯಲ್ಲಿ ಇಳುವರಿಯನ್ನು ಅಧಿಕಗೊಳಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :1. ಹೊಸ ಪ್ರಾತ್ಯಕ್ಷತೆ ತಾಕುಗಳಿಗೆ ಸಹಾಯಧನ: ಭೌತಿಕ ಗುರಿ 25 ಹೆಕ್ಟೇರ್ ಆರ್ಥಿಕ ಗುರಿ 4.375 ಲಕ್ಷಗಳು
2. 2015-16 ನೇ ಸಾಲಿನ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ : ಭೌತಿಕ ಗುರಿ 25 ಹೆಕ್ಟೇರ್ ಆರ್ಥಿಕ ಗುರಿ 4.375 ಲಕ್ಷಗಳು
3. ತೆಂಗು ತೋಟಗಳ ಪ್ರದೇಶ ವಿಸ್ತರಣೆ (ಸಿಡಿಬಿ) ಅನುಷ್ಠಾನಗೊಳಿಸುವ ಪ್ರದೇಶಕ್ಕೆ ರಾಜ್ಯದ ಪಾಲು ಭೌತಿಕ ಗುರಿ 1.1 ಹೆಕ್ಟೇರ್ ಆರ್ಥಿಕ ಗುರಿ 0.08ಲಕ್ಷ
4. ತೆಗಿನ ಬೆಳೆಗೆ ಸಸ್ಯ ಸಂರಕ್ಷಣೆ ಔಷದಿ ಭೌತಿಕ ಗುರಿ 1.1 ಹೆಕ್ಟೇರ್ ಆರ್ಥಿಕ ಗುರಿ 0.08ಲಕ್ಷ
5.ನೀರಾ ಘಟಕ ಭೌತಿಕ ಗುರಿ 1.00 ಹೆಕ್ಟೇರ್ ಆರ್ಥಿಕ ಗುರಿ 2.00ಲಕ್ಷ

5) ಫಲಾನುಭವಿಯ ಅರ್ಹತೆ :1. ಫಲಾನುಭವಿಯು ಸ್ವಂತ ಜಮೀನಿನಲ್ಲಿ ತೆಂಗು ಬೆಳೆಯನ್ನು ಬೆಳೆಯುತ್ತಿರ ತಕ್ಕದ್ದು .
2. ಕಡಿಮೆ ಇಳುವರಿ ಕೊಡುವಂತಹ ಹಾಗೂ ಕೀಟ ಮತ್ತು ರೋಗಗಳ ಬಾಧೆಗೊಳಗಾದ ಹಾಗೂ ಮಳೆಯಾಶ್ರಿತ ತಾಕುಗಳಿಗೆ ಆದ್ಯತೆ ನೀಡುವುದು.

6) ಅನುದಾನ ಪಡೆಯಲು ಮಾನದಂಡ : 1ತೆಂಗಿನ ತೋಟಗಳ ಪುನಶ್ಚೇತನ/ಮರುನಾಟಿ ಮತ್ತು ನಿರ್ವಹಣೆ ಹಾಗೂ ಪ್ರಾತ್ಯಕ್ಷತೆ ತಾಕಿನ ರೈತರು ಫಲ ನೀಡುವಂತಹ ತೆಂಗಿನ ತೋಟವನ್ನು ಹೊಂದಿರಬೇಕು..

7)ಅನುದಾನದ ವಿವರಣೆ :1.ಪ್ರಾತ್ಯಕ್ಷತೆ ತಾಕುಗಳನ್ನು ಅಭಿವೃದ್ಧಿಪಡಿಸಿ ಇಳುವರಿಯನ್ನು ಹೆಚ್ಚಿಸಲು 2 ವರ್ಷಗಳ ಕಾರ್ಯಕ್ರಮಕ್ಕೆ ರೂ.35000ಗಳ ಅನುದಾನವನ್ನು ಪ್ರತೀ ವರ್ಷಕ್ಕೆ ರೂ.17500 ರಂತೆ 2 ವಾರ್ಷಿಕ ಕಂತುಗಳಲ್ಲಿ ನೀಡಲಾಗುವುದು.

## 8. ಸೂಕ್ಷ್ಮ ನೀರಾವರಿ ಯೋಜನೆ.

1) ಯೋಜನೆ ಹೆಸರು :ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಅಭಿವೃದ್ಧಿ ಯೋಜನೆ.

2) ಯೋಜನೆಯ ವರ್ಷ : 2016-17

3) ಯೋಜನೆಯ ಉದ್ದೇಶ :ನೀರಿನ ಮಿತಬಳಕೆ ಮಾಡಿಕೊಂಡು ಬೆಳೆಯ ಉತ್ಪಾದಕತೆ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :220.7 ಹೆಕ್ಟೇರುಗಳು ,ರಾಜ್ಯದ ಪಾಲುರೂ.35.872 ಲಕ್ಷಗಳು ಹಾಗೂ ಕೇಂದ್ರ ಪಾಲು ರೂ.53.808 ಲಕ್ಷಗಳು.

5) ಫಲಾನುಭವಿಯ ಅರ್ಹತೆ :1. 2016-17ನೇ ಸಾಲಿನಲ್ಲಿ ಹನಿ ನೀರಾವರಿ ಪದ್ಧತಿಯನ್ನು ಅನುಮೋದಿತ ಹನಿನೀರಾವರಿ ಸಂಸ್ಥೆ ಅಥವಾ ಡೀಲರ್‌ಗಳ ಮೂಲಕ ತೋಟಗಾರಿಕೆ ಬೆಳೆಗಳಿಗೆ ಅಳವಡಿಸಿಕೊಂಡಿರಬೇಕು.

2. ಸ್ವಂತ ಜಮೀನು ಹೊಂದಿರಬೇಕು.

3.ಪ್ರತಿ ಫಲಾನುಭವಿಗೆ ಗರಿಷ್ಟ 5 ಹೆಕ್ಟೇರುಗಳವರೆಗೆ ಸಹಾಯಧನವನ್ನು ಈ ಕೆಳಗಿನಂತೆ ನೀಡಲಾಗುವುದು.

-ಮೊದಲ 2 ಹೆಕ್ಟೇರುಗಳವರೆಗೆ ಶೇ.90ರಷ್ಟು .

-2ರಿಂದ 5 ಹೆಕ್ಟೇರುಗಳವರೆಗೂ ಶೇ.45 ರಷ್ಟು.

6) ಅನುದಾನ ಪಡೆಯಲು ಮಾನದಂಡ :1.ಫಲಾನುಭವಿಗಳ ಸ್ವಂತ ಹೆಸರಿನಲ್ಲಿ ತೋಟಗಾರಿಕೆ ಬೆಳೆ ಹೊಂದಿರಬೇಕು.

2. 2016-17ನೇ ಸಾಲಿಗೆ ನಿರ್ದೇಶನಾಲಯದಿಂದ ಅನುಮೋದಿತ ಕಂಪೆನಿಗಳಿಂದ ತಮ್ಮ ತಾಕುಗಳಿಗೆ ಹನಿ ನೀರಾವರಿ ಅಳವಡಿಸಿರಬೇಕು.

7)ಅನುದಾನದ ವಿವರಣೆ :ಈ ಯೋಜನೆಯಡಿ ಎಲ್ಲಾ ವರ್ಗದ ಫಲಾನುಭವಿಗಳಿಗೆ ಶೇ.90 ರ ಸಹಾಯಧನ ನೀಡಲಾಗುತ್ತದೆ ಹಾಗೂ ಉಳಿಕೆ ಶೇ.10 ರೈತರ ಪಾಲಾಗಿರುತ್ತದೆ.

## 9. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ

### 1.ಬಹು ವಾರ್ಷಿಕವಲ್ಲದ ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆ ( ಬಾಳೆ ಹಾಗೂ ಅನನಾಸು )

1) ಕಾರ್ಯಕ್ರಮದ ಹೆಸರು : ಬಹು ವಾರ್ಷಿಕವಲ್ಲದ ಹಣ್ಣಿನ ಬೆಳೆಗಳ ಪ್ರದೇಶ ವಿಸ್ತರಣೆ ( ಬಾಳೆ ಹಾಗೂ ಅನನಾಸು )

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಪ್ರದೇಶ ವಿಸ್ತರಣೆ ಹಾಗೂ ಉತ್ತಮ ಜಾತಿಯ/ ತಳಿಗಳ , ಹಣ್ಣುಗಳ ಉತ್ಪಾದನೆಯ ಹೆಚ್ಚಳವನ್ನು ಸಾಧಿಸುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :1.ಬಾಳೆ ಪ್ರದೇಶ ವಿಸ್ತರಣೆ: ಭೌತಿಕ ಗುರಿ 20 ಹೆಕ್ಟೇರ್ ಆರ್ಥಿಕ ಗುರಿ ರೂ.4.46 ಲಕ್ಷ

2. ಅನನಾಸು ಪ್ರದೇಶ ವಿಸ್ತರಣೆ: ಭೌತಿಕ ಗುರಿ 10 ಹೆಕ್ಟೇರ್ ಆರ್ಥಿಕ ಗುರಿ ರೂ.2.63 ಲಕ್ಷ

3.ಬಾಳೆ ಪ್ರದೇಶ ವಿಸ್ತರಣೆ(ಮೊದಲನೇ ಸಾಲಿನ ನಿರ್ವಹಣೆ ): ಭೌತಿಕ ಗುರಿ 50 ಹೆಕ್ಟೇರ್ ಆರ್ಥಿಕ ಗುರಿ ರೂ.3.62 ಲಕ್ಷ

4. ಅನನಾಸು ಪ್ರದೇಶ ವಿಸ್ತರಣೆ (ಮೊದಲನೇ ಸಾಲಿನ ನಿರ್ವಹಣೆ ) : ಭೌತಿಕ ಗುರಿ 16 ಹೆಕ್ಟೇರ್ ಆರ್ಥಿಕ ಗುರಿ ರೂ.1.4 ಲಕ್ಷ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , ಜಮೀನು ಸದರಿ ಬೆಳೆ ಬೆಳೆಯಲು ಸೂಕ್ತವಾಗಿರಬೇಕು ಹಾಗೂ ಸುಧಾರಿತ ತಳಿಗಳಿಗೆ

ಆದ್ಯತೆ ನೀಡಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7)ಅನುದಾನದ ವಿವರಣೆ : ಸಹಾಯಧನದ ಮೊತ್ತ ಬಾಳೆ ಪ್ರದೇಶ ವಿಸ್ತರಣೆಗೆ ರೂ 26000/ ಹೆಕ್ಟೇರ್ ಹಾಗೂ ಅನಾನಸು ಪ್ರದೇಶ ವಿಸ್ತರಣೆಗೆ ರೂ ರೂ. 32500 ಪ್ರತೀ ಹೆಕ್ಟೇರ್‌ಗೆ ಕನಿಷ್ಠ 0.4 ಹೆ. ನಿಂದ ಗರಿಷ್ಠ 4.00 ಹೆ. ಗಳವರೆಗೆ ಬಿಬ್ಬ ಫಲಾನುಭವಿಯು ಸಹಾಯಧನವನ್ನು ಪಡೆಯಲು ಅರ್ಹನಾಗಿರುತ್ತಾನೆ. ಸಹಾಯಧನವನ್ನು 2 ಕಂತಿನಲ್ಲಿ 75:25 ರ ಅನುಪಾತದಲ್ಲಿ ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು.

## 2.ತೋಟದ ಬೆಳೆಗಳ ಪ್ರದೇಶ ವಿಸ್ತರಣೆ ( ಗೇರು ಮತ್ತು ಕೋಕೋ )

1) ಕಾರ್ಯಕ್ರಮದ ಹೆಸರು : ತೋಟದ ಬೆಳೆಗಳ ಪ್ರದೇಶ ವಿಸ್ತರಣೆ ( ಗೇರು ಮತ್ತು ಕೋಕೋ)

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಪ್ರದೇಶ ವಿಸ್ತರಣೆ , ರೈತರಿಗೆ ಹೆಚ್ಚು ಇಳುವರಿ ತಳಿಗಳ ವಿತರಣೆಯಿಂದ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :1.ಗೇರು ಪ್ರದೇಶ ವಿಸ್ತರಣೆ: ಭೌತಿಕ ಗುರಿ 60 ಹೆಕ್ಟೇರ್ ಆರ್ಥಿಕ ಗುರಿ ರೂ.7.2 ಲಕ್ಷ
2. ಕೋಕೋ ಪ್ರದೇಶ ವಿಸ್ತರಣೆ: ಭೌತಿಕ ಗುರಿ 23 ಹೆಕ್ಟೇರ್ ಆರ್ಥಿಕ ಗುರಿ ರೂ.2.76 ಲಕ್ಷ
3. ಕೋಕೋ ಪ್ರದೇಶ ವಿಸ್ತರಣೆ (ಮೊದಲನೇ ಸಾಲಿನ ನಿರ್ವಹಣೆ ) : ಭೌತಿಕ ಗುರಿ 21 ಹೆಕ್ಟೇರ್ ಆರ್ಥಿಕ ಗುರಿ ರೂ.0.84 ಲಕ್ಷ
4.ಗೇರು ಪ್ರದೇಶ ವಿಸ್ತರಣೆ(ಮೊದಲನೇ ಸಾಲಿನ ನಿರ್ವಹಣೆ ): ಭೌತಿಕ ಗುರಿ 57 ಹೆಕ್ಟೇರ್ ಆರ್ಥಿಕ ಗುರಿ ರೂ.2.28 ಲಕ್ಷ
5. ಕೋಕೋ ಪ್ರದೇಶ ವಿಸ್ತರಣೆ (ಎರಡನೇ ಸಾಲಿನ ನಿರ್ವಹಣೆ ) : ಭೌತಿಕ ಗುರಿ 7 ಹೆಕ್ಟೇರ್ ಆರ್ಥಿಕ ಗುರಿ ರೂ..28 ಲಕ್ಷ
6. ಗೇರು ಪ್ರದೇಶ ವಿಸ್ತರಣೆ (ಎರಡನೇ ಸಾಲಿನ ನಿರ್ವಹಣೆ ) : ಭೌತಿಕ ಗುರಿ 16 ಹೆಕ್ಟೇರ್ ಆರ್ಥಿಕ ಗುರಿ ರೂ.0.64 ಲಕ್ಷ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , ಜಮೀನು ಸದರಿ ಬೆಳೆ ಬೆಳೆಯಲು ಸೂಕ್ತವಾಗಿರಬೇಕು ಹಾಗೂ ಸುಧಾರಿತ ತಳಿಗಳಿಗೆ ಆದ್ಯತೆ ನೀಡಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7)ಅನುದಾನದ ವಿವರಣೆ : ಸಹಾಯಧನದ ಮೊತ್ತ ಪ್ರತೀ ಹೆಕ್ಟೇರ್‌ಗೆ ಶೇ.40 ರಷ್ಟು ಗರಿಷ್ಠ ರೂ. 20000 ಕ್ಕೆ ಮೀರದಂತೆ ಪ್ರತೀ ಫಲಾನುಭವಿಗಳಿಗೆ ಗರಿಷ್ಠ 4.00 ಹೆ. ಗಳಿಗೆ ಸಹಾಯಧನವನ್ನು 3 ಕಂತಿನಲ್ಲಿ 60:20:20 ರ ಅನುಪಾತದಲ್ಲಿ ಪರಿಕರ ಅಥವಾ ನಗದು ಯಾ ಎರಡೂ ರೂಪದಲ್ಲಿ ನೀಡಲಾಗುವುದು.ನಗದನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು.

## 3. ಸಾಂಬಾರು ಬೆಳೆಗಳ ಪ್ರದೇಶ ವಿಸ್ತರಣೆ ( ಕಾಳುಮೆಣಸು ಮತ್ತು ಜಾಯಿಕಾಯಿ)

| | |
|---|---|
| 1) ಕಾರ್ಯಕ್ರಮದ ಹೆಸರು | : ಸಾಂಬಾರು ಬೆಳೆಗಳ ಪ್ರದೇಶ ವಿಸ್ತರಣೆ ( ಕಾಳುಮೆಣಸು ಮತ್ತು ಜಾಯಿಕಾಯಿ) |
| 2) ಯೋಜನೆಯ ವರ್ಷ | : 2016-17 |
| 3) ಕಾರ್ಯಕ್ರಮದ ಉದ್ದೇಶ | : ಪ್ರದೇಶ ವಿಸ್ತರಣೆ , ರೈತರಿಗೆ ಹೆಚ್ಚು ಇಳುವರಿ ತಳಿಗಳ ವಿತರಣೆಯಿಂದ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವುದು. ರೈತರ ಆದಾಯ ಹೆಚ್ಚಿಸುವುದು. |
| 4) ಭೌತಿಕ ಹಾಗೂ ಆರ್ಥಿಕ ಗುರಿ | :1.ಕಾಳುಮೆಣಸು ಪ್ರದೇಶ ವಿಸ್ತರಣೆ: ಭೌತಿಕ ಗುರಿ 15 ಹೆಕ್ಟೇರ್ ಆರ್ಥಿಕ ಗುರಿ ರೂ.3.00 ಲಕ್ಷ<br>2. ಜಾಯಿಕಾಯಿ ಹಾಗೂ ಇತರ ಸಾಂಬಾರು ಬೆಳೆ ಪ್ರದೇಶ ವಿಸ್ತರಣೆ: ಅನುದಾನ ನಿಗದಿಯಾಗಿರುವುದಿಲ್ಲ |
| 5) ಫಲಾನುಭವಿಯ ಅರ್ಹತೆ | : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , ಜಮೀನು ಸದರಿ ಬೆಳೆ ಬೆಳೆಯಲು ಸೂಕ್ತವಾಗಿರಬೇಕು ಹಾಗೂ ಸುಧಾರಿತ ತಳಿಗಳಿಗೆ ಆದ್ಯತೆ ನೀಡಬೇಕು. |
| 6) ಅನುದಾನ ಪಡೆಯಲು ಮಾನದಂಡ | : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡ ಗಳನ್ನು ಅನುಸರಿಸಲಾಗುವುದು. |
| 7)ಅನುದಾನದ ವಿವರಣೆ | : ಸಹಾಯಧನದ ಮೊತ್ತ ಪ್ರತೀ ಹೆಕ್ಟೇರ್‌ಗೆ ಶೇ.40 ರಷ್ಟು ಗರಿಷ್ಠ ರೂ. 20000 ಕ್ಕೆ ಮೀರದಂತೆ ಪ್ರತೀ ಫಲಾನುಭವಿಗಳಿಗೆ ಗರಿಷ್ಠ 4.00 ಹೆ. ಗಳಿಗೆ ಸಹಾಯಧನವನ್ನು ಪರಿಕರ ಅಥವಾ ನಗದು ಯಾ ಎರಡೂ ರೂಪದಲ್ಲಿ ನೀಡಲಾಗುವುದು.ನಗದನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು. |

## 4. ಕಟ್ ಫ್ಲವರ್ಸ್ ಪ್ರದೇಶ ವಿಸ್ತರಣೆ ( ಆಂಥೂರಿಯಂ ಮತ್ತು ಆರ್ಕಿಡ್)

| | |
|---|---|
| 1) ಕಾರ್ಯಕ್ರಮದ ಹೆಸರು | : ಕಟ್ ಫ್ಲವರ್ಸ್ ಪ್ರದೇಶ ವಿಸ್ತರಣೆ ( ಆಂಥೂರಿಯಂ ಮತ್ತು ಆರ್ಕಿಡ್) |
| 2) ಯೋಜನೆಯ ವರ್ಷ | : 2016-17 |
| 3) ಕಾರ್ಯಕ್ರಮದ ಉದ್ದೇಶ | : ವಾಣಿಜ್ಯ ಪುಷ್ಪಬೆಳೆಗಳ ಪ್ರದೇಶ ವಿಸ್ತರಣೆ , ಹೂ ಬೆಳೆಗಳನ್ನು ಬೆಳೆಯುವ ರೈತರಿಗೆ ಸಹಾಯ ಮತ್ತು ಉತ್ತೇಜನ ನೀಡಲು ಹಾಗೂ ಇದರಿಂದಾಗಿ ಹೆಚ್ಚಿನ ಪ್ರದೇಶಗಳನ್ನು ಹೂಗಳ ಹೊಸ ಹಾಗೂ ಸೂಕ್ತ ತಳಿಗಳನ್ನು ಪರಿಚಯಿಸಿ ಅಭಿವೃದ್ಧಿ ಪಡಿಸುವುದು. ರೈತರ ಆದಾಯ ಹೆಚ್ಚಿಸುವುದು. |
| 4) ಭೌತಿಕ ಹಾಗೂ ಆರ್ಥಿಕ ಗುರಿ | :1.ಕಟ್ ಫ್ಲವರ್ಸ್ ಪ್ರದೇಶ ವಿಸ್ತರಣೆ( ಇತರೆ ರೈತರಿಗೆ) ಅನುದಾನ ನಿಗದಿಯಾಗಿರುವುದಿಲ್ಲ |
| 5) ಫಲಾನುಭವಿಯ ಅರ್ಹತೆ | : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , ಅಥವಾ 10 ವರ್ಷಗಳಿಗೆ Land lease agreement ಮಾಡಿ ಕೊಂಡಿರಬೇಕು ಹಾಗೂ ಅಗತ್ಯ ನೀರಾವರಿ ಸೌಲಭ್ಯಗಳು ಇರಲೇಬೇಕು. ಸಹಾಯಧನವನ್ನು ಹೊಸದಾಗಿ ನಾಟಿ ಮಾಡಿರುವ ತಾಕುಗಳಿಗೆ ಮಾತ್ರ ನೀಡುವುದು. |
| 6) ಅನುದಾನ ಪಡೆಯಲು ಮಾನದಂಡ | : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು. |
| 7)ಅನುದಾನದ ವಿವರಣೆ | : ಸಣ್ಣ ಮತ್ತು ಅತೀ ಸಣ್ಣ ರೈತರಿಗೆ- ಬೇಸಾಯ ಕ್ರಮಗಳಿಗೆ ತಗಲುವ ವೆಚ್ಚದ ಶೇ.50 ರಂತೆ ಪ್ರತೀ ಯೂನಿಟ್‌ಗೆ. ಗರಿಷ್ಠ ರೂ. 35000 ಗಳ ಸಹಾಯಧನವನ್ನು ಗರಿಷ್ಠ 2 ಯೂನಿಟ್ ಬೆಳೆ ವಿಸ್ತೀರ್ಣಕ್ಕೆ ನೀಡಲಾಗುವುದು. ಹಾಗೂ ಇತರೆ ರೈತರಿಗೆ ಬೇಸಾಯ ಕ್ರಮಗಳಿಗೆ ತಗಲುವ ವೆಚ್ಚದ ಶೇ. 33 |

ರಷ್ಟೆ ಗರಿಷ್ಠ ರೂ.23100 ಗಳ ಸಹಾಯಧನವನ್ನು ಗರಿಷ್ಠ 4 ಯೂನಿಟ್ ಬೆಳೆ ವಿಸ್ತೀರ್ಣಕ್ಕೆ ನೀಡಲಾಗುವುದು. ಸಹಾಯಧನವನ್ನು ಪರಿಕರ ಅಥವಾ ನಗದು ಯಾ ಎರಡೂ ರೂಪದಲ್ಲಿ ನೀಡಲಾಗುವುದು.ನಗದನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು.

## 5. ಬಿಡಿ ಪುಷ್ಪಗಳ ಪ್ರದೇಶ ವಿಸ್ತರಣೆ ( ಉಡುಪಿ ಮಲ್ಲಿಗೆ)

1) ಕಾರ್ಯಕ್ರಮದ ಹೆಸರು : ಬಿಡಿ ಪುಷ್ಪಗಳ ಪ್ರದೇಶ ವಿಸ್ತರಣೆ ( ಉಡುಪಿ ಮಲ್ಲಿಗೆ)

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಪ್ರದೇಶ ವಿಸ್ತರಣೆ , ಹೂ ಬೆಳೆಗಳನ್ನು ಬೆಳೆಯುವ ರೈತರಿಗೆ ಸಹಾಯ ಮತ್ತು ಉತ್ತೇಜನ ನೀಡಲು ಹಾಗೂ ಇದರಿಂದಾಗಿ ಹೆಚ್ಚಿನ ಪ್ರದೇಶಗಳನ್ನು ಹೂಗಳ ಹೊಸ ಹಾಗೂ ಸೂಕ್ತ ತಳಿಗಳನ್ನು ಪರಿಚಯಿಸಿ ಅಭಿವೃದ್ಧಿ ಪಡಿಸುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :1. ಉಡುಪಿ ಮಲ್ಲಿಗೆ ಪ್ರದೇಶ ವಿಸ್ತರಣೆ( ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ) : ಭೌತಿಕ ಗುರಿ 10 ಹೆಕ್ಟೇರ್ ಆರ್ಥಿಕ ಗುರಿ ರೂ.1 ಲಕ್ಷ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , Land lease agreement ಮಡಿಕೊಂಡಿರಬೇಕು ಹಾಗೂ ಅಗತ್ಯ ನೀರಾವರಿ ಸೌಲಭ್ಯಗಳು ಇರಲೇಬೇಕು. ಸಹಾಯಧನವನ್ನು ಹೊಸದಾಗಿ ನಾಟಿ ಮಾಡಿರುವ ತಾಕುಗಳಿಗೆ ಮಾತ್ರ ನೀಡಲಾಗುವುದು.

6) ಅನುದಾನ ಪಡೆಯಲು ಮಾನದಂಡ :ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7)ಅನುದಾನದ ವಿವರಣೆ : ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಬೇಸಾಯ ಕ್ರಮಗಳಿಗೆ ತಗಲುವ ವೆಚ್ಚದ ಶೇ.40 ರಷ್ಟೆ ಪ್ರತೀ ಯೂನಿಟ್‌ಗೆ ಗರಿಷ್ಠ ರೂ. 10000 ಗಳ ಸಹಾಯಧನವನ್ನು ಗರಿಷ್ಠ 2 ಯೂನಿಟ್ ಬೆಳೆ ವಿಸ್ತೀರ್ಣಕ್ಕೆ ನೀಡಲಾಗುವುದು. ಸಹಾಯಧನವನ್ನು ಪರಿಕರ ಅಥವಾ ನಗದು ಯಾ ಎರಡೂ ರೂಪದಲ್ಲಿ ನೀಡಲಾಗುವುದು.ನಗದನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು.

## 6.ಅ ಗೇರು ಪುನಶ್ಚೇತನ

1) ಕಾರ್ಯಕ್ರಮದ ಹೆಸರು : ಗೇರು ಪುನಶ್ಚೇತನ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ :ಹಳೆ ಗೇರು ತೋಟಗಳ ಪುನಶ್ಚೇತನ ಮಾಡಿ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :1.ಗೇರು ಪುನಸ್ಚೇತನ: ಭೌತಿಕ ಗುರಿ 20 ಹೆಕ್ಟೇರ್ ಆರ್ಥಿಕ ಗುರಿ ರೂ.4 ಲಕ್ಷ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , ಹಳೆ ಗೇರು ತೋಟ ಹೊಂದಿರಬೇಕು ಹಾಗೂ ಪುನಶ್ಚೇತನ ಮಾಡಲು ಸಿದ್ಧವಿರಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7)ಅನುದಾನದ ವಿವರಣೆ : ಸಹಾಯಧನದ ಮೊತ್ತ ಪ್ರತೀ ಹೆಕ್ಟೇರ್‌ಗೆ ಶೇ.50 ರಷ್ಟೆ ಗರಿಷ್ಠ ರೂ. 20000ಕ್ಕೆ ಮೀರದಂತೆ ಪ್ರತೀ ಫಲಾನುಭವಿಗಳಿಗೆ ಗರಿಷ್ಠ 2.00 ಹೆ. ಗಳಿಗೆ

ಸಹಾಯಧನ ನೀಡಲಾಗುವುದು. ಸಹಾಯಧನವನ್ನು ಪರಿಕರ ಅಥವಾ ನಗದು ಯಾ ಎರಡೂ ರೂಪದಲ್ಲಿ ನೀಡಲಾಗುವುದು. ನಗದನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು.

## 6.ಆ ಕಾಳುಮೆಣಸು ಪುನಶ್ಚೇತನ

1) ಕಾರ್ಯಕ್ರಮದ ಹೆಸರು : ಕಾಳುಮೆಣಸು ಪುನಶ್ಚೇತನ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ :ಹಳೆ ಕಾಳೂಮೆಣು ತೋಟಗಳ ಪುನಶ್ಚೇತನ ಮಾಡಿ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :1.ಕಾಳುಮೆಣಸು ಪುನಸ್ಚೇತನ: ಭೌತಿಕ ಗುರಿ 10 ಹೆಕ್ಟೇರ್ ಆರ್ಥಿಕ ಗುರಿ ರೂ.2.00 ಲಕ್ಷ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , ಹಳೆ ಕಾಳುಮೆಣಸು ತೋಟ ಹೊಂದಿರಬೇಕು ಹಾಗೂ ಪುನಶ್ಚೇತನ ಮಾಡಲು ಸಿದ್ಧವಿರಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7)ಅನುದಾನದ ವಿವರಣೆ : ಸಹಾಯಧನದ ಮೊತ್ತ ಪ್ರತೀ ಹೆಕ್ಟೇರ್‌ಗೆ ಶೇ.50 ರಷ್ಟು ಗರಿಷ್ಠ ರೂ. 20000ಕ್ಕೆ ಮೀರದಂತೆ ಪ್ರತೀ ಫಲಾನುಭವಿಗಳಿಗೆ ಗರಿಷ್ಠ 2.00 ಹೆ. ಗಳಿಗೆ ಸಹಾಯಧನ ನೀಡಲಾಗುವುದು. ಸಹಾಯಧನವನ್ನು ಪರಿಕರ ಅಥವಾ ನಗದು ಯಾ ಎರಡೂ ರೂಪದಲ್ಲಿ ನೀಡಲಾಗುವುದು. ನಗದನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು.

## 7.ಕೃಷಿ ಹೊಂಡ

1) ಕಾರ್ಯಕ್ರಮದ ಹೆಸರು : ಕೃಷಿ ಹೊಂಡ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಸಂದಿಗ್ನ ಪರಿಸ್ಥಿತಿಯಲ್ಲಿ ತೋಟಗಾರಿಕೆ ಬೆಳೆಗಳಿಗೆ ನೀರಾವರಿ ಮಾಡಲು ನೀರನ್ನು ಸಂಗ್ರಹಿಸಿ ಇಡುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ :1.ಕೃಷಿ ಹೊಂಡ: ಭೌತಿಕ ಗುರಿ 5 ಘಟಕ ಆರ್ಥಿಕ ಗುರಿ ರೂ.3.75 ಲಕ್ಷ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು . ಮಾರ್ಗ ಸೂಚಿಯಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕು. ಕನಿಷ್ಠ 1 ಎಕರೆ ಪ್ರದೇಶ ಹೊಂದಿದ್ದು ಕನಿಷ್ಠ 600ಘ.ಮೀ ಅಳತೆಯ ಘಟಕ ನಿರ್ಮಿಸಬೆಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು. ಕನಿಷ್ಠ 1ಎಕರೆ ಪ್ರದೇಶಕ್ಕೆ ಕನಿಷ್ಠ 300ಘ.ಮೀ ಘಟಕಕ್ಕೆ ರೂ 18750 ಸಹಾಯಧನ. ಗರಿಷ್ಠ 2.5 ಎಕರೆಗೆ 1200 ಘ.ಮೀ ಸಾಮರ್ಥ್ಯ ದ ಘಟಕ್ಕೆ ಗರಿಷ್ಠ 75000 ರೂಗಳ ಸಹಾಯಧನ

7) ಅನುದಾನದ ವಿವರಣೆ : ಫಲನುಭವಿ ಯೋಜನಾ ವರದಿಯನ್ನು ಇಲಾಖೆಗೆ ಸಲ್ಲಿಸಬೇಕು. ಘಟಕ ಮಂಜೂರು ಆದ ನಂತರ ಕಾಮಗಾರಿ ಪ್ರಾರಂಬಿಸಬೇಕು. ಮಣ್ಣು ತೆಗೆಯುವ ಕಾಮಗಾರಿ , ಲೈನಿಂಗ್ ನೀಡುವ ಕಾಮಗಾರಿ ,ತೋಟಗಾರಿಕೆ ಬೆಳೆಗಳನ್ನು ನಾಟಿ ಮಾಡಿದ , ಹನಿ ನೀರಾವರಿ ಯಾ ಹೊದಿಕೆ ಮಾಡಿದ ಕಾಮಗಾರಿ ಪೂರ್ಣ ಗೊಂಡ ನಂತರ ಸಹಾಯಧನವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ NEFT / ECS ಮುಖಾಂತರ ಜಮಾ ಮಾಡಲಾಗುವುದು.

## 8.ಸಂರಕ್ಷಿತ ಬೇಸಾಯ

1) ಕಾರ್ಯಕ್ರಮದ ಹೆಸರು : ಸಂರಕ್ಷಿತ ಬೇಸಾಯ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಸಂರಕ್ಷಿತ ಬೇಸಾಯದ ಮೂಲಕ ಉತ್ಪಾದನೆ ಹಗೂ ಉತ್ಪಾದಕತೆ ಹೆಚ್ಚಿಸುವುದು. ರೈತರ ಆದಾಯ ಹೆಚ್ಚಿಸುವುದು. ಎಲ್ಲಾ ಋತುಮಾನದಲ್ಲಿ ಬೆಳೆಗಳನ್ನು ಬೆಳೆಯುವುದು. ಬೆಲೆಯನ್ನು ಪ್ರಕೃತಿ ವಿಕೋಪದಿಂದ/ಕೀಟ ರೋಗದಿಂದ ಕಾಪಾಡುವುದು

4) ಭೌತಿಕ ಹಾಗೂ ಆರ್ಥಿಕ ಗುರಿ :1ಕಡಿಮೆ ವೆಚ್ಚ ದ ನೆರಳು ಪರದೆ(ಇತರೆ): ಅನುದಾನ ನಿಗದಿಯಾಗಿರುವುದಿಲ್ಲ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು , ಜಮೀನು ಸದರಿ ಬೆಳೆ ಬೆಳೆಯಲು ಸೂಕ್ತವಾಗಿರಬೇಕು ಹಾಗೂ ಸುಧಾರಿತ ತಳಿಗಳಿಗೆ ಆದ್ಯತೆ ನೀಡಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7) ಅನುದಾನದ ವಿವರಣೆ : ಯೋಜನಾ ಮಾದರಿಯಲ್ಲಿ ಪ್ರಸ್ತಾವನೆ ಸಲ್ಲಿಸಬೇಕು. ಸಹಾಯಧನವನ್ನು ಬ್ಯಾಕ್ ಎಂಡೆಡ್ ಸಹಯಧನವಾಗಿ ರೈತರ ಸಾಲದ ಖಾತೆಗೆ ನೀಡಲಾಗುವುದು

## 9.ಸಮಗ್ರ ಕೀಟ/ರೋಗ ನಿಯಂತ್ರಣ ಹಾಗೂ ಪೋಷಕಾಂಶ ನಿರ್ವಹಣೆ

1) ಕಾರ್ಯಕ್ರಮದ ಹೆಸರು : ಸಮಗ್ರ ಕೀಟ/ರೋಗ ನಿಯಂತ್ರಣ ಹಾಗೂ ಪೋಷಕಾಂಶ ನಿರ್ವಹಣೆ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ತೋಟಗಾರಿಕೆ ಬೆಳೆಗಳ ಕೀಟ ಹಾಗೂ ರೋಗಗಳ ನಿಯಂತ್ರಣಕ್ಕೆ ಸಹಯಧನ ನೀಡುವುದು. ಈ ಮೂಲಕ ಉತ್ಪಾದಕತೆ ಹೆಚ್ಚಿಸುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : ಸಮಗ್ರ ಕೀಡ ನಿರ್ವಹಣೆ: 1400 ಹೆಗೆ ರೂ 16.8 ಲಕ್ಷ, ಸಮಗ್ರ ಪೋಷಕಾಂಶ ನಿರ್ವಹಣೆಗೆ 1200 ಹೆಗೆ ರೂ 12 ಲಕ್ಷ.

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು. ತೋಟಗಾರಿಕೆ ಬೆಳೆ ಹೊಂದಿರಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡ ಗಳನ್ನು ಅನುಸರಿಸಲಾಗುವುದು.

7) ಅನುದಾನದ ವಿವರಣೆ : ಪ್ರತೀ ಹೆಗೆ. ಗರಿಷ್ಟ 1200 ಘಟಕ ವೆಚ್ಚಕ್ಕೆ ಶೇಕಡಾ 30 ರ ಸಹಾಯಧನವನ್ನು ರೈತರಿಗೆ ವಿತರಿಸಲಾಗುವುದು.

## 10.ಪರಾಗಸ್ಪರ್ಷಕ್ಕೆ ಸಹಾಯ

1) ಕಾರ್ಯಕ್ರಮದ ಹೆಸರು : .ಪರಾಗಸ್ಪರ್ಷಕ್ಕೆ ಸಹಾಯ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಜೇನು ಸಾಕಾಣಿಕೆ ಮಾಡಿ ಪರಾಗಸ್ಪರ್ಷದ ಮೂಲಕ ತೋಟಗಾರಿಕೆ ಬೆಳೆಗಳ ಉತ್ಪಾದಕತೆ ಹೆಚ್ಚಿಸುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : 1600 ಜೇನು ಕುಟುಂಬಗಳ ಜೆನು ಪೆಟ್ಟಿಗೆ ಗಳಿಗೆ ರೂ 12.8 ಲಕ್ಷ

5) ಫಲಾನುಭವಿಯ ಅರ್ಹತೆ : ಫಲಾನುಭವಿ ಸ್ವಂತ ಹೆಸರಿನಲ್ಲಿ ಜಮೀನು ಹೊಂದಿರಬೇಕು. ತೋಟಗಾರಿಕೆ ಬೆಳೆ ಹೊಂದಿರಬೇಕು. ಜೇನು ಬೇಸಾಯ ಮಾಡಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7) ಅನುದಾನದ ವಿವರಣೆ : ಪ್ರತೀ ಜೇನು ಕುಟುಂಬವುಳ್ಳ ಜೇನು ಪೆಟ್ಟಿಗೆ ಖರೀದಿಗೆ ಮತ್ತು ಜೇನುಕುಟುಂಬ ಖರೀದಿಗೆ ಗರಿಷ್ಠ ರೂ 1600 ರಂತೆ ಸಹಾಯಧನವನ್ನು ರೈತರ ಖಾತೆಗೆ ಜಮಾ ಮಾಡಲಾಗುವುದು .

## 11. ಸಾವಯುವ ಬೇಸಾಯ

1) ಕಾರ್ಯಕ್ರಮದ ಹೆಸರು : ಸಾವಯುವ ಬೇಸಾಯ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಸಾವಯುವ ಬೇಸಾಯ ಪ್ರದೇಶ ಹೆಚ್ಚಿಸುವುದು. ಮಣ್ಣಿನ ಹಾಗೂ ನೀರಿನ ಆರೋಗ್ಯ ಕಾಪಾಡುವುದು. ರೈತರ ಆದಾಯ ಹೆಚ್ಚಿಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : 200 ಹೆ ಸಾವಯುವ ಪರಿವರ್ತನೆಗೆ ರೂ 8.00 ಲಕ್ಷ. ಸವಯವ ದೃಡೀಕರಣಕ್ಕೆ ರೂ 6.00 ಲಕ್ ಹಾಗೂ 5 ಸಾವಯವ ಘಟಕಗಳ ಸ್ಥಾಪನೆಗೆ ರೂ 1.50 ಲಕ್ಷ

5) ಫಲಾನುಭವಿಯ ಅರ್ಹತೆ : ಸಾವಯುವ ಪರಿವರ್ತನೆಗೆ ಸಿದ್ದರಿರಬೇಕು. ತೋಟಗಾರಿಕೆ ಬೆಳೆ ಹೊಂದಿರಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯುವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡ ಗಳನ್ನು ಅನುಸರಿಸಲಾಗುವುದು.

7) ಅನುದಾನದ ವಿವರಣೆ : ಸಾವಯುವ ಪರಿವರ್ತನೆಗೆ ತ್ರತೀ ಫಲಾನುಭವಿಗೆ ಪ್ರತೀ ಹೆ.ಗೆ ರೂ 10000 ಗಳ ಸಹಾಯಧನವನ್ನು 40:30:30 ಅನುಪಾತದಲ್ಲಿ ಮೂರು ವರ್ಷಗಳಲ್ಲಿ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು. ಗರಿಷ್ಠ ಮಿತಿ 10 ಹೆ. ದೃಡೀಕರಣ ಸಹಾಯಧನವನ್ನು ನೇರವಾಗಿ ಸರ್ವಿಸ್ ಪ್ರೋವೈಡರ್ಸ್ ನೀಡಲಾಗುವುದು ಸಾವಯುವ ಘಟಕಗಳಿಗೆ ಶೇ 50 ರ ಗರಿಷ್ಠ 30000 ಸಹಾಯಧನವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

## 12. ಮಾನವ ಸಂಪನ್ಮೂಲ ಅಭಿವೃದ್ಧಿ

1) ಕಾರ್ಯಕ್ರಮದ ಹೆಸರು : ಮಾನವ ಸಂಪನ್ಮೂಲ ಅಭಿವೃದ್ಧಿ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ತರಬೇತಿ ಹಾಗೂ ಪ್ರವಾಸಗಳ ಮೂಲಕ ಇಲಾಖಾ ಅಧಿಕಾರಿಗಳಿಗೆ ಹಾಗೂ ರೈತರಿಗೆ ತೋಟಗಾರಿಕೆಯಲ್ಲಾದ ಹೊಸ ಬೆಳವಣಿಗೆ ಹಾಗೂ ತಯಿಜ್ಞಾನದ ಬಗ್ಗೆ ಅರಿವು ಮೂಡಿಸಿ ತಾಂತ್ರಿಕ ಜ್ಞಾನ ಹಾಗೂ ಕೌಶಲ್ಯತೆ ಹೆಚ್ಚಿಸುವುದು. ರೈತರು ತಮ್ಮ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಲು ಪ್ರೋತ್ಸಾಹಿಸುವುದು

4) ಭೌತಿಕ ಹಾಗೂ ಆರ್ಥಿಕ ಗುರಿ : 125 ರೈತರಿಗೆ ತರಬೇತಿ/ಪ್ರವಾಸ ಹಾಗೂ ರೂ 9.38 ಲಕ್ಷ

5) ಫಲಾನುಭವಿಯ ಅರ್ಹತೆ : ರೈತರಾಗಿರಬೇಕು.

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7) ಅನುದಾನದ ವಿವರಣೆ : ಏಬ್ಬ ರೈತರಿಗೆ ಏಂದು ದಿನದ ತರಬೇತಿಗೆ ರೂ 300 ರಂತೆ , 5 ದಿನದ ತರಬೇತಿಗೆ ರೂ 1500 ರಂತೆ ಹಾಗೂ ಹೊರರಾಜ್ಯ ಪ್ರವಾಸಕ್ಕೆ ರೂ 2500 ರಂತೆ ವೆಚ್ಚ ಭರಿಸಲಾಗುವುದು. ತರಬೇತಿಗಳನ್ನು ಇಲಾಖೆ ಯಾ ಸಂಘ ಸಂಸ್ಥೆಗಳ ಮೂಲಕ ನಡೆಸಲಾಗುವುದು.

## 13. ಕೊಯ್ಲೋತ್ತರ ನಿರ್ವಹಣೆ ಹಾಗೂ ಮಾರುಕಟ್ಟೆ

1) ಕಾರ್ಯಕ್ರಮದ ಹೆಸರು : ಕೊಯ್ಲೊತ್ತರ ನಿರ್ವಹಣೆ ಹಾಗೂ ಮಾರುಕಟ್ಟೆ

2) ಯೋಜನೆಯ ವರ್ಷ : 2016-17

3) ಕಾರ್ಯಕ್ರಮದ ಉದ್ದೇಶ : ಕೊಯ್ಲೋತ್ತರ ನಷ್ಟ ವನ್ನು ಕಡಿಮೆ ಮಾಡುವುದು ಹಾಗೂ ಮಾರುಕಟ್ಟೆಗಳ ಸ್ಥಾಪನೆಗೆ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ದಿಗೆ ಪ್ರೋತ್ಸಾಹಿಸುವುದು. ರೈತರಿಗೆ ಮಾರುಕಟ್ಟೆ ಕಲ್ಪಸುವುದು.

4) ಭೌತಿಕ ಹಾಗೂ ಆರ್ಥಿಕ ಗುರಿ : ಶೀತಲೀಕೃತ ವಾಹನ :ಅನುದಾನ ನಿಗದಿಯಾಗಿರುವುದಿಲ್ಲ
ಸಂರಕ್ಷಣೆ ಘಟಕಕ್ಕೆ ಅನುದಾನ ನಿಗದಿಯಾಗಿರುವುದಿಲ್ಲ
ಶೀಥಲೀಕೃತ ಕೃಗಾಡಿ ಅನುದಾನ ನಿಗದಿಯಾಗಿರುವುದಿಲ್ಲ

5) ಫಲಾನುಭವಿಯ ಅರ್ಹತೆ : ರೈತರು/ಸಂಘ ಸಂಸ್ತೆಗಳು/ಉದ್ದಿಮೆದಾರರು

6) ಅನುದಾನ ಪಡೆಯಲು ಮಾನದಂಡ : ಫಲಾನುಭವಿಗಳ ಸಹಾಯಧನದ ಅರ್ಜಿಯನ್ನು ಪರಿಶೀಲಿಸುವಾಗ ತೋಟಗಾರಿಕೆ ನಿರ್ದೇಶನಾಲಯವು ನೀಡಿದ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ನು ಅನುಸರಿಸಲಾಗುವುದು.

7) ಅನುದಾನದ ವಿವರಣೆ : ಯೋಜನಾ ಆಧಾರಿತ ಪ್ರಸ್ತಾವನೆಗೆಳಿಗೆ ಕ್ರೆಡಿಟ್ ಲಿಂಕ್ ಡ್ ಬ್ಯಾಕ್ ಎಂಡೆಡ್ ಸಹಾಯಧನವಾಗಿ ಶೇಕಡಾ 25 ರ ಸಹಾಯಧನ ಸಾಲದ ಖಾತೆಗೆ ಜಮಾ ಮಾಡಲಾಗುವುದು.

ಮೇಲ್ಕಂಡ ಎಲ್ಲಾ ಯೋಜನೆಗಳಡಿ ಫಲಾನುಭವ ಪಡೆದ ಫಲಾನುಭವಿಗಳ ಬಗ್ಗೆ ಮಾಹಿತಿಯನ್ನು ತಾಲೂಕು ಕಛೇರಿಯಲ್ಲಿ ಕ್ರೋಢೀಕರಿಸಲಾಗಿರುತ್ತದೆ.

**4(ಬಿ)(XIII): ಇಲಾಖೆಯಿಂದ ಅಥೋರೈಸೇಷನ್ ಮಂಜೂರಾದ ಅಥವಾ ಪರವಾನಗಿ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್ಸ್‌ಗಳ ವಿವರಗಳು**

ಈ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿದೆ

**4(ಬಿ)(XIV) ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿಯ ವಿವರ ದೊರಕುವಿಕೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ**

- ಕ್ರಿಯಾ ಯೋಜನೆಗಳು
- ಪ್ರಗತಿವರದಿಗಳು
- ಮಾರ್ಗಸೂಚಿಗಳು.

**4(ಬಿ)(XV): ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶಗಳ ವಿವರಗಳು ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಖಿಳಗೊಂಡು, ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದಾರೆ.**

ಕಛೇರಿ ವೇಳೆಯಲ್ಲಿ ಸಾರ್ವಜನಿಕರು ಅಧಿಕಾರಿ/ನೌಕರರಿಂದ ಮಾಹಿತಿಗಳನ್ನು ಪಡೆಯಲು ಮುಕ್ತ ಅವಕಾಶವಿರುತ್ತದೆ.

**4(ಬಿ)(XVI): ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಪದನಾಮ ಮತ್ತು ಇತರೆ ವಿವರಗಳು**

ಕೆ ಪ್ರವೀಣ
ಕೇಂದ್ರ ಕಛೇರಿ ಸಹಾಯಕರು
ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ
ಜಿಲ್ಲಾ ಪಂಚಾಯತ್, ಮಂಗಳೂರು.
ದೂರವಾಣಿ: 0824-2423628

**ಸಹಾಯಕ ಮಾಹಿತಿ ಅಧಿಕಾರಿ**

ಶ್ರೀ ಮತಿ ಯಶೋಧ ಪಿ ಎಸ್
ಅಧೀಕ್ಷಕರು
ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ
ಜಿಲ್ಲಾ ಪಂಚಾಯತ್, ಮಂಗಳೂರು.
ದೂರವಾಣಿ: 0824 -2423628

**4(ಬಿ)XVII: ನಿಗದಿಪಡಿಸಲಾದ ಇತರ ವಿಷಯಗಳು**

ಯಾವುದೂ ಇಲ್ಲ